# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಫೆಬ್ರವರಿ 16, 2022

ಸಂಪುಟ : 48 ಸಂಚಿಕೆ : 277 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ರಾ..ರಾ.. ಎಂದಾಗ ಬಂದಳು ಭದ್ರೆ

### ತರಳಬಾಳು ಹುಣ್ಣಿಮೆಯ ಎರಡನೇ ದಿನ ಸಂಗೀತ ಸುಧೆ


ಸಿರಿಗೆರೆ, ಫೆ. 15 – ತರಳಬಾಳು ಹುಣ್ಣಿಮೆ ಮಹೋತ್ಸವದ ಎರಡನೇ ದಿನದಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಪಿಟೀಲು ನುಡಿಸುವ ಮೂಲಕ ಸಂಗೀತ ಸುಧೆ ಹರಿಸಿದರು. ತರಳಬಾಳು ಜಗದ್ಗುರುಗಳ ಪರಿಶ್ರಮದಿಂದ ಜಾರಿಯಾಗುತ್ತಿರುವ ಜಗಳೂರು ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಫಲ ನೀಡುತ್ತಿರುವ ಸುದ್ದಿಯೂ ಭಕ್ತರಿಗೆ ದೊರೆಯಿತು.

ಎರಡನೇ ದಿನ ಸಿರಿಗೆರೆ ಶ್ರೀಗಳು ಪಿಟೀಲು ವಾದನ ಮಾಡಲಿದ್ದಾರೆ ಎಂದು ತಿಳಿಸಲಾಗಿತ್ತು. ಆದರೆ, ಸಾಮಾಜಿಕ ಕಾರ್ಯಗಳ ಒತ್ತಡದಿಂದಾಗಿ ಸಂಗೀತಜ್ಞರ ರೀತಿ ಅಭ್ಯಾಸ ಮಾಡಲು ಸಾಧ್ಯವಾಗಿಲ್ಲ ಎಂದು ಶ್ರೀಗಳು ತಿಳಿಸಿದರು.

ಕಷ್ಟದ ಹಿಂದೋಳ ರಾಗದಲ್ಲಿ ಪಿಟೀಲು ವಾದನಕ್ಕೆ ಶ್ರೀಗಳು ಮುಂದಾದರು. ಆದರೆ, ಅಭ್ಯಾಸ ತಪ್ಪಿರುವ ಕಾರಣ ಅಪಸ್ವರ ಮಾಡಿ ಸಂಗೀತ ತಜ್ಞರಿಗೆ ನೋವು ನೀಡಲಾರೆ ಎಂದ ಶ್ರೀಗಳು, ಮೀರಾ ದರ್ಶನ್‌ನ ದೀಜೋ ಆಜ್ ಪ್ಯಾರೆ ಹಾಡಿನತ್ತ ಹೊರಳಿದರು.

ನಂತರ ಹಿರಿಯ ಜಗದ್ಗುರುಗಳಾದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರ ನೆನೆಯುತ್ತಾ 'ಎದೆ ತುಂಬಿ ಹಾಡಿದೆನು' ನುಡಿಸಿದರು. ನಡುವೆ ಹಾಡಿಗೂ ದನಿಗೂಡಿಸಿದರು.

ನಂತರ ಮಾತನಾಡಿದ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಅವರು ಜಗಳೂರಿನ ಹಿರೇಮೇಗಳ (4ನೇ ಪುಟಕ್ಕೆ)




### ಹಿರೇಮೇಗಳಗೆರೆ ಕೆರೆಗೆ ಬಂದ ನೀರು ಭಾವುಕರಾದ ಶಾಸಕ ರಾಮಚಂದ್ರ

ಸಿರಿಗೆರೆ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಆಶಯದಂತೆ ಜಗಳೂರಿನ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೆ ಬರುತ್ತಿದೆ. ಯೋಜನೆಯ ಪೈಪ್ ಮೂಲಕ ಹಿರೇಮೇಗಳಗೆರೆ ಕೆರೆಗೆ ಇವತ್ತು ನೀರು ತಲುಪಿದೆ ಎಂದು ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಅವರು ಸಭೆಗೆ ತಿಳಿಸಿದರು.

ತರಳಬಾಳು ಶ್ರೀಗಳನ್ನು ನೀರು ತುಂಬಿರುವ ಕೆರೆಗಳಿಗೆ ಕರೆದುಕೊಂಡು ಹೋಗಿ ಪಾದ ಪೂಜೆ ಮಾಡಬೇಕಿದೆ ಎಂದು ಹೇಳುವಾಗ ರಾಮಚಂದ್ರ ಭಾವುಕರಾದರು. ಮಾಜಿ ಶಾಸಕ ಹೆಚ್. ಪಿ. ರಾಜೇಶ್ ಮಾತನಾಡಿ, ಬರದ ನಾಡಾದ (4ನೇ ಪುಟಕ್ಕೆ)

# ಇಂದಿನಿಂದ ಕಾಲೇಜು ಪುನರಾರಂಭ

## ಶಾಂತಿ ಕಾಯ್ದುಕೊಳ್ಳಲು ಮುಂಜಾಗ್ರತಾ ಕ್ರಮ : ಸಚಿವ ಜ್ಞಾನೇಂದ್ರ

ಬೆಂಗಳೂರು, ಫೆ. 15 - ರಾಜ್ಯದಲ್ಲಿ ನಾಳೆಯಿಂದ ಎಲ್ಲಾ ಶಾಲಾ-ಕಾಲೇಜುಗಳು ಪ್ರಾರಂಭವಾಗುವ ಹಿನ್ನೆಲೆಯಲ್ಲಿ ಶಾಂತಿ, ಸುವ್ಯವಸ್ಥೆಗೆ ಭಂಗ ಆಗದಂತೆ, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನಸಭೆಯಲ್ಲಿ ಭರವಸೆ ನೀಡಿದ್ದಾರೆ.

ಶಾಲಾ-ಕಾಲೇಜುಗಳಲ್ಲಿ ವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ಚಾಚೂ ತಪ್ಪದೇ ಪಾಲಿಸುವುದಾಗಿ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಇದೇ ಸಂದರ್ಭದಲ್ಲಿ ಸದನಕ್ಕೆ ತಿಳಿಸಿದರು.

ಪ್ರಶ್ನೋತ್ತರ ವೇಳೆ ಹಾಗೂ ಶೂನ್ಯ ವೇಳೆಯಲ್ಲಿ ಪ್ರತ್ಯೇಕವಾಗಿ ಸದಸ್ಯರು ಮಾಡಿದ ಪ್ರಸ್ತಾವಕ್ಕೆ ಪ್ರತಿಕ್ರಿಯಿಸಿದ ಸಚಿವರುಗಳು, ನ್ಯಾಯಾಲಯದ ಆದೇಶದಂತೆ ಶಾಲಾ-ಕಾಲೇಜುಗಳಲ್ಲಿ ಪಾಠ-ಪ್ರವಚನಗಳು ಜರುಗಲಿವೆ ಎಂದಿದ್ದಾರೆ.

ಕೆಲವೆಡೆ ಸಣ್ಣ-ಪುಟ್ಟ ಗೊಂದಲಗಳಿದ್ದು, ಅವುಗಳನ್ನು ಶಿಕ್ಷಣ ಸಚಿವರು ನಿವಾರಿಸಲಿದ್ದಾರೆ.

ಯಾವ ಶಿಕ್ಷಣ ಸಂಸ್ಥೆಗಳಲ್ಲಿ ಗೊಂದಲ ಉಂಟಾಗುವ ಸಾಧ್ಯತೆ ಇದೆಯೋ ಅಲ್ಲಿ ಪೊಲೀಸ್ ಬಿಗಿ ಬಂದೋ ಬಸ್ತ್ ಮಾಡಲಾಗಿದೆ. ಪೋಷಕರು ಆತಂಕ ಪಡುವ ಅಗತ್ಯವಿಲ್ಲ, ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಮನವಿ ಮಾಡಿದರು.

ವಿದ್ಯಾರ್ಥಿಗಳು ಯಾವುದೇ ಆತಂಕ ಅಥವಾ ಅಭದ್ರತೆಯ ಭಯವಿಲ್ಲದೆ ಪಠ್ಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕೇವಲ ಬೆರಣಿಕೆಯಷ್ಟು ವಿದ್ಯಾರ್ಥಿಗಳು ಹಿಜಾಬ್ ಧರಿಸಿಯೇ ಶಾಲೆಗೆ ಬರುತ್ತೇವೆ ಎಂದಿದ್ದಾರೆ. ಅದು ಅವರ ಸ್ವಾಭಾವಿಕವಾದ ಅಭಿಪ್ರಾಯ ಅಲ್ಲ ಎಂದು ತಮ್ಮ ಅನಿಸಿಕೆ ಎಂದು ಗೃಹ ಸಚಿವರು ತಿಳಿಸಿದರು.

ನಾವೆಲ್ಲರೂ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶಕ್ಕೆ ಗೌರವ ನೀಡಬೇಕು, ಅದರಂತೆ ನಡೆದುಕೊಳ್ಳಬೇಕು ಎಂದರು. ಕೆಲವು ಮತೀಯ ಸಂಘಟನೆಗಳು, (4ನೇ ಪುಟಕ್ಕೆ)


## ಪುಣ್ಯಸ್ಮರಣೆ



ಲಿಂ॥ ಎಂ.ಜಿ. ಬಕ್ಕೇಶ್
ಮಾಜಿ ಮೇಯರ್, ಮಹಾನಗರ ಪಾಲಿಕೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.
ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು,
ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಸಹೋದರರು : ಎಂ.ಜಿ. ರಾಜಣ್ಣ,
ಎಂ.ಜಿ. ಬಸವರಾಜ್, ಎಂ.ಜಿ. ಬಾಬಣ್ಣ
ಧರ್ಮಪತ್ನಿ : ಶ್ರೀಮತಿ ಎಂ.ಬಿ. ಅನಿತಾ ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.

ಉಮಾ ಟ್ರೇಡರ್ಸ್,
ದಾವಣಗೆರೆ, ಚಿತ್ರದುರ್ಗ.
ಉಮಾ ಟ್ರೇಡಿಂಗ್ ಕಂಪನಿ,
ಉಮಾ ಮಹೇಶ್ವರ ಇಂಡಸ್ಟ್ರೀಸ್
ಹರಿಹರ ರಸ್ತೆ, ದಾವಣಗೆರೆ.







## ಕಾಲೇಜು ಆವರಣದ ಒಳಗೆ ಧಾರ್ಮಿಕ ವಸ್ತ್ರ ತೆಗೆಯಲು ವ್ಯವಸ್ಥೆ: ಡಿಸಿ ಬೀಳಗಿ



ದಾವಣಗೆರೆ, ಫೆ. 15 - ಹಿಜಾಬ್ ವಿವಾದದ ಹಿನ್ನೆಲೆಯಲ್ಲಿ ಕಳೆದ ಫೆಬ್ರವರಿ 9ರಿಂದ ಬಂದ್ ಆಗಿದ್ದ ಪಿ.ಯು. ಹಾಗೂ ಪದವಿ ತರಗತಿಗಳು ನಾಳೆ ಬುಧವಾರದಿಂದ ಮತ್ತೆ ಆರಂಭವಾಗಲಿವೆ.

ಹೈಕೋರ್ಟ್ ಮಧ್ಯಂತರ ಆದೇಶದ ಅನ್ವಯ ಧಾರ್ಮಿಕ ಸಂಕೇತದ ಬಟ್ಟೆಗಳನ್ನು ವಿದ್ಯಾರ್ಥಿಗಳು ಧರಿಸುವಂತಿಲ್ಲ. ಜಿಲ್ಲಾಡಳಿತ ಈ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ದೇಶನಗಳನ್ನು ನೀಡುವ ಜೊತೆಗೆ ಶಾಂತಿ - ಸೌಹಾರ್ದತೆಗಾಗಿ ಬಂದೋಬಸ್ತ್ ವ್ಯವಸ್ಥೆ ಮಾಡಲು ಸೂಚಿಸಿದೆ.

ಇದೆಲ್ಲದರ ನಡುವೆ ಹೈಸ್ಕೂಲ್‌ನ 9 ಹಾಗೂ 10ನೇ ತರಗತಿಗಳು ಸೋಮವಾರ ದಿಂದ ಪುನರಾರಂಭವಾಗಿವೆ. ಈ ಸಂದರ್ಭ ದಲ್ಲಿ ಆದ ಕೆಲ ಘಟನೆಗಳನ್ನು ಗಮನದ ಲ್ಲಿಟ್ಟುಕೊಂಡು, ಕಾಲೇಜು ಆರಂಭದ ವೇಳೆ ಮುನ್ನೆಚ್ಚರಿಕೆಯನ್ನೂ ವಹಿಸಲಾಗುತ್ತಿದೆ.

ಹೈಸ್ಕೂಲ್ ವಿದ್ಯಾರ್ಥಿನಿಯರು ಹಿಜಾಬ್ ಅನ್ನು ಶಾಲೆಯ ಗೇಟುಗಳಲ್ಲೇ ತೆಗೆದು ಒಳಹೋಗಬೇಕು ಎಂದು ಕೆಲ ಶಾಲೆಗಳು (4ನೇ ಪುಟಕ್ಕೆ)

### 19ರವರೆಗೆ ನಿಷೇಧಾಜ್ಞೆ

**ದಾವಣಗೆರೆ, ಫೆ. 15- ಜಿಲ್ಲೆಯಲ್ಲಿ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಗಾಗಿ ಈಗಾಗಲೇ ವಿಧಿಸಲಾಗಿರುವ ವಿಷೇಧಾಜ್ಞೆಯನ್ನು ಜಿಲ್ಲಾಡಳಿತ ಫೆ.19ರ ಸಂಜೆ 6 ಗಂಟೆಯವರೆಗೆ ವಿಸ್ತರಿಸಿದೆ. ಹಿಜಾಬ್ ಹಾಗೂ ಕೇಸರಿ ಶಾಲಿನ ವಿವಾದ ಭುಗಿಲೆದ್ದ ನಂತರ ಜಿಲ್ಲೆಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ.**

## ಹಿಜಾಬ್ ಬಿಡುವುದಿಲ್ಲ ಎಂದು 23 ವಿದ್ಯಾರ್ಥಿನಿಯರು ಪರೀಕ್ಷೆಗೆ ಗೈರು



ಹರಿಹರ, ಫೆ.15 - ನಗರದ ಧ.ರಾ.ಮ. ಸರ್ಕಾರಿ ಪ್ರೌಢಶಾಲೆಯ 23 ವಿದ್ಯಾರ್ಥಿನಿಯರು ಹೈಕೋರ್ಟ್ ಮಧ್ಯಂತರ ಆದೇಶದಂತೆ ಹಿಜಾಬ್ ಬಿಡಲು ನಿರಾಕರಿಸಿದ್ದು, ಎಸ್.ಎಸ್.ಎಲ್.ಸಿ ಜಿಲ್ಲಾ ಪೂರ್ವ ಸಿದ್ದತಾ ಪರೀಕ್ಷೆಗೆ ಹಾಜರಾಗದೇ ವಾಪಸ್ಸಾಗಿದ್ದಾರೆ.

ನಗರದ ಧ.ರಾ.ಮ. ಸರ್ಕಾರಿ ಪ್ರೌಢಶಾಲೆಯಲ್ಲಿ ಒಟ್ಟು 399 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅದರಲ್ಲಿ 305 ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಇದ್ದಾರೆ. ಇಂದು ಶಾಲೆಗೆ 141 ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಹಾಜರಾಗಿದ್ದರು. ಅದರಲ್ಲಿ 61 ಮಕ್ಕಳು ಎಸ್.ಎಸ್.ಎಲ್.ಸಿ ಜಿಲ್ಲಾ ಪೂರ್ವ ಸಿದ್ದತೆ ಗಣಿತ ವಿಷಯದ ಪರೀಕ್ಷೆಗೆ ಹಿಜಾಬ್ ಧರಿಸಿ ಆಗಮಿಸಿದ್ದರು.

**ಹರಿಹರ ಧ.ರಾ.ಮ. ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ ಬರೆಯಬೇಕಾಗಿದ್ದ ವಿದ್ಯಾರ್ಥಿನಿಯರು**

ಆದರೆ, ಹೈಕೋರ್ಟ್ ಆದೇಶವನ್ನು ಪಾಲಿಸುವಂತೆ ಸರ್ಕಾರದಿಂದ ಆದೇಶ ಬಂದಿರುವುದರಿಂದ, ಶಾಲೆಯಲ್ಲಿ ಹಿಜಾಬ್‌ಗೆ ಅವಕಾಶ ಇಲ್ಲ. ಹಿಜಾಬ್ ರಹಿತವಾಗಿ ಪರೀಕ್ಷೆ ಬರೆಯಬೇಕು ಎಂದು ವಿದ್ಯಾರ್ಥಿಗಳಿಗೆ ಶಿಕ್ಷಕರು ತಿಳಿಸಿದರು.

ಆಗ 23 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯದೇ ವಾಪಸ್ಸಾಗಿದ್ದಾರೆ. 8 ನೇ ತರಗತಿಯ 3 ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಪೋಷಕರಿಗೆ ಕೇಳಿಕೊಂಡು ಬರುವುದಾಗಿ ಮನೆಗಳಿಗೆ ವಾಪಸ್ ಹೋಗಿದ್ದಾರೆ.

ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ಮಾತನಾಡಿ, ಹರಿಹರ ತಾಲ್ಲೂಕಿನ ಖಾಸಗಿ ಮತ್ತು ಅನುದಾನ ರಹಿತ ಸೇರಿದಂತೆ, ಒಟ್ಟು 60 ಪ್ರೌಢಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಜಿಲ್ಲಾ ಪೂರ್ವ (4ನೇ ಪುಟಕ್ಕೆ)




# ಸಿರಿಗೆರೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ರಸದೌತಣ



ಸಿರಿಗೆರೆ, ಫೆ.15-ಗುರುಶಾಂತೇಶ್ವರ ದಾಸೋಹ ಭವನದ ಮುಂಭಾಗದಲ್ಲಿ ವಿಶೇಷವಾಗಿ ನಿರ್ಮಿಸಿದ್ದ ವರ್ಣರಂಜಿತ ವೇದಿಕೆಯಲ್ಲಿ ಪ್ರದರ್ಶನಗೊಂಡ ವಿವಿಧ ಸಂಗೀತ ನೃತ್ಯ ಪ್ರಕಾರಗಳು ಪ್ರೇಕ್ಷಕರ ಚಿತ್ತಾಕರ್ಷಕವಾಗಿದ್ದವು.

ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಪ್ರಪ್ರಥಮ ಸಲ ತರಳಬಾಳು ಹುಣ್ಣಿಮೆಯ ವೇದಿಕೆಯಲ್ಲಿ ಪಿಟೀಲು ವಾದನ ನುಡಿಸಿದರು. ಶ್ರೀಗಳ ಪಿಟೀಲು ವಾದನಕ್ಕೆ ಖ್ಯಾತ ಗಾಯಕ ಶಶಿಧರ ಕೋಟೆಯವರ ವಾದ್ಯವೃಂದ ಸಾತ್ ನೀಡಿದರು. ಮಥುರ ಬೃಂದಾವನದ ಕು. ವಿಷ್ಣುಪ್ರಿಯ ಗೋಸಾಮಿಯವರ ಭಕ್ತಿಪ್ರಧಾನ ಒಡಿಸ್ಸಿ ನೃತ್ಯ ಮತ್ತು ಚೆನ್ನೈನ ಚಿತ್ರಾ ಚಂದ್ರಶೇಖರರ ಭರತನಾಟ್ಯ ಮನಸೂರೆಗೊಂಡಿತು.

ಸಿರಿಗೆರೆ ಬಾಲಕಿಯರ ಮಲ್ಲಿಹಗ್ಗದ ಕಸರತ್ತು ಮೈನವಿರೇಳಿಸುವಂತಿತ್ತು. ಶಶಿಧರ ಕೋಟೆ ಮತ್ತು ಸಂಗಡಿಗರ ಭಕ್ತಿ ಸಂಗೀತದ ರಸಧಾರೆ ಸೂಜಿಗಲ್ಲಿನಂತೆ ಸೆಳೆಯಿತು. ಗೊಟಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ 'ವೀರ ವಧೆ' ದೊಡ್ಡಾಟ ಪ್ರೇಕ್ಷಕರ ಕರತಾಡನಕ್ಕೆ ಪಾತ್ರವಾಯಿತು.

ತರಳಬಾಳು ಹುಣ್ಣಿಮೆಯ ಎರಡನೆಯ ದಿನವಾದ ಕಾರ್ಯಕ್ರಮದಲ್ಲಿ ತಳಕಲ್ಲು ತಂಡದವರಿಂದ ಭಜನೆ ಹಾಗೂ ಬೆಂಗಳೂರು ಶಶಿಧರ ಕೋಟೆ ಮತ್ತು ತಂಡದವರಿಂದ ವಚನಗೀತೆ ಮತ್ತು ಸಂಗೀತ ಸಂಭ್ರಮ ಆರಂಭಗೊಂಡಿತು.

ಕಾರ್ಯಕ್ರಮದಲ್ಲಿ ಜಿ.ಎಚ್.ತಿಪ್ಪಾರೆಡ್ಡಿ, ಬೆಳ್ಳಿಪ್ರಕಾಶ್, ಮಾಡಾಳು ವಿರೂಪಾಕ್ಷಪ್ಪ, ಎಸ್. ವಿ.ರಾಮಚಂದ್ರಪ್ಪ, ಜಗಳೂರು ಎಚ್.ಪಿ.ರಾಜೇಶ್ ಇತರರು ಉಪಸ್ಥಿತರಿದ್ದರು.

ಬೃಹನ್ಮಠದ ಗುರುಶಾಂತೇಶ್ವರ ಭವನದ ಮುಂಭಾಗದ ಆವರಣದಲ್ಲಿ ನೀರಿನ ಕಾರಂಜಿ ಮನರಂಜಿಸುತ್ತಿತ್ತು. ಗಣ್ಯರ ಹಾಗೂ ಭಕ್ತರ ಆಗಮನಕ್ಕೆ ತೆಂಗಿನ ಗರಿಗಳಿಂದ ಎಣೆದ ಚಪ್ಪರ ಆಕರ್ಷಿಸುತ್ತಿತ್ತು.

ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಕಲಾವಿದರಿಂದ ಚಿತ್ರಾ ಚಂದ್ರಶೇಖರ್ ತಂಡದಿಂದ ಭರತ ನಾಟ್ಯಂ, ಉತ್ತರಪ್ರದೇಶ ಬೃಂದಾವನ ವಿಷ್ಣುಪ್ರಿಯ ಗೋಸ್ವಾಮಿ ಕಲಾವಿದರಿಂದ ಒಡಿಸ್ಸಿ ನೃತ್ಯ, ಹಾವೇರಿ ಗೊಟಗೋಡಿ ತಂಡದಿಂದ 'ವೀರ ಅಭಿಮನ್ಯುವಿನ ವಧೆ' ದೊಡ್ಡಾಟ, ತರಳಬಾಳು ಕಲಾಸಂಘದಿಂದ ಮಲ್ಲಿಹಗ್ಗ, ನಗಾರಿ, ಬೀಸು ಕಂಸಾಳೆ ಪ್ರದರ್ಶವಿತ್ತು.

## ತರಳಬಾಳು ಹುಣ್ಣಿಮೆಯಲ್ಲಿ ಇಂದು ಸದ್ಧರ್ಮ ಸಿಂಹಾಸನಾರೋಹಣ

ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಕೊನೆಯ ದಿನವಾದ ಇಂದು ಬೆಳಿಗ್ಗೆ 11 ಗಂಟೆಗೆ 'ವ್ಯಕ್ತಿತ್ವ ವಿಕಸನ' ಕುರಿತ ವಿಚಾರ ಗೋಷ್ಠಿ ನಡೆಯಲಿದೆ.

ಮೈಸೂರಿನ ವ್ಯಕ್ತಿತ್ವ ವಿಕಸನ ತರಬೇತುದಾರ ಡಾ. ಆರ್.ಎ ಚೇತನ್ ರಾಮ್ ಅವರು 'ವ್ಯಕ್ತಿತ್ವ ವಿಕಸನ' ಕುರಿತು ಹಾಗೂ ಶಿಕಾರಿಪುರ ಸಾಧನಾ ಅಕಾಡೆಮಿ ಸಂಸ್ಥಾಪಕ ಬಿ. ಮಂಜುನಾಥ್ ಅವರು 'ಎಸ್ಸೆಸ್ಸೆಲ್ಸಿ, ಪಿಯುಸಿ ನಂತರ ಮುಂದೇನು? ಕುರಿತು ಮಾತನಾಡಲಿದ್ದಾರೆ.

ಸಂಜೆ 6.30 ಕ್ಕೆ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಸದ್ಧರ್ಮ ಸಿಂಹಾಸನಾರೋಹಣ ಕಾರ್ಯಕ್ರಮ ನೆರವೇರಲಿದೆ.

ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ನಾರಾಯಣಸ್ವಾಮಿ, ಸಚಿವರಾದ ಬಿ.ಸಿ.ಪಾಟೀಲ್, ಜೆ.ಸಿ. ಮಾಧುಸ್ವಾಮಿ, ಸಂಸದ ಜಿ.ಎಂ. ಸಿದ್ದೇಶ್ವರ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಮಹೇಶ್ ಜೋಷಿ ಅವರನ್ನು ಸನ್ಮಾನಿಸಲಾಗುವುದು.

'ಆಧುನಿಕ ಶಿಕ್ಷಣದ ಜೊತೆಯಲಿ ಧಾರ್ಮಿಕ ಶಿಕ್ಷಣದ ಅಗತ್ಯತೆ' ಕುರಿತು ಬೆಂಗಳೂರು ಪ್ರಜ್ಞಾ ಪ್ರವಾಹ ಸಂಯೋಜಕ ರಘುನಂದನ್ ಹಾಗೂ 'ವಿಶ್ವಬಂಧು ಮರುಳಸಿದ್ಧನ ಪರಂಪರೆ' ಕುರಿತು ಚಿಕ್ಕಮಗಳೂರು ಸಾಹಿತಿ ಮಹೇಶ್ ಚಟ್ನಳ್ಳಿ ಅವರು ಉಪನ್ಯಾಸ ನೀಡಲಿದ್ದಾರೆ.

### ಮಧ್ಯಾಹ್ನ ಮೆರವಣಿಗೆ

ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ರಯುಕ್ತ ಮಧ್ಯಾಹ್ನ 2.30ಕ್ಕೆ ಸಿರಿಗೆರೆಯ ಐಕ್ಯ ಮಂಟಪದಿಂದ ಸಭಾ ಕಾರ್ಯಕ್ರಮ ಏರ್ಪಾಡಾಗಿರುವ ಸ್ಥಳದವರೆಗೂ ಮೆರವಣಿಗೆ ನಡೆಯಲಿದೆ ಎಂದು ಶಿವಸೈನ್ಯ ಯುವಕರ ಸಂಘದ ಗೌರವಾಧ್ಯಕ್ಷ ಶಶಿಧರ ಹೆಮ್ಮನಬೇತೂರು ತಿಳಿಸಿದ್ದಾರೆ.

# ಪಂಚಮಸಾಲಿ,ಪಟ್ಟಸಾಲಿ, ಕುರುಬರು ಸ್ಥಿತಿವಂತರಿದ್ದಾರೆ...

## ರಾಣೇಬೆನ್ನೂರು ನಗರಸಭೆ ಅಧಿವೇಶನದಲ್ಲಿ ಪ್ರತಿಪಾದನೆ



ರಾಣೇಬೆನ್ನೂರು, ಫೆ.15- ಪಟ್ಟಸಾಲಿ, ಪಂಚಮಸಾಲಿ ಹಾಗೂ ಕುರುಬ ಈ ಮೂರು ಸಮಾಜದವರು ಒಂದೇ ಸರ್ವೆ ನಂಬರ್ ನಿವೇಶನ ಕೇಳಿದ್ದಾರೆ. ಆದ್ಯತೆ ಮೇಲೆ ಯಾರಿಗಾದರೂ ಕೊಡಿ ಎಂದ ನಗರಸಭಾ ಕಾಂಗ್ರೆಸ್ ಸದಸ್ಯ ನಿಂಗರಾಜ ಕೋಡಿಹಳ್ಳಿ ಅವರು, ಈ ಮೂರೂ ಸಮಾಜದವರು ಸ್ಥಿತಿವಂತರಿದ್ದಾರೆ. ದುಡ್ಡು ಕೊಟ್ಟು ಖರೀದಿ ಮಾಡುವ ಶಕ್ತಿ ಇವರಿಗಿದೆ. ಇವರನ್ನ ಹೊರತುಪಡಿಸಿ, ಇತರೆ ಬಡ ಸಮಾಜದವರಿಗೆ ಆ ನಿವೇಶನ ಕೊಡಿ ಎಂದು ಬಲವಾಗಿ ಪ್ರತಿಪಾದಿಸಿದರು.

ಇಂದು ನಡೆದ ನಗರಸಭೆ ಅಧಿವೇಶನದಲ್ಲಿ ಹಿಂದಿನ ಸಭೆ ಠರಾವುಗಳನ್ನು ಓದಿ ದೃಢೀಕರಿಸುವ ವಿಷಯ ಕುರಿತು ಸದಸ್ಯ ನಿಂಗರಾಜ ಮಾತನಾಡುತ್ತಿದ್ದರು.

ಎಲ್ಲ ರೀತಿಯಲ್ಲೂ ವಿಚಾರ ಮಾಡಿ ಪಟ್ಟಸಾಲಿ ಸಮಾಜದವರಿಗೆ ನಿವೇಶನ ಕೊಡಲಾಗಿದೆ ಎಂದು ಅಧ್ಯಕ್ಷರು ಪ್ರಕಟಿಸಿದ್ದು ಕೇಳಿಬಂದಿತು.

ಟೆಂಡರ್‌ಗಳಲ್ಲಿ ಕಡಿಮೆ ದರ ಹಾಕಿದವರನ್ನ ಬಿಟ್ಟು, ಕೆಲಸ ಮಾಡಲಾಗದಂತಹ ನಿಮಗೆ ಬೇಕಾದವರಿಗೆ ಕೆಲಸ ಕೊಟ್ಟಿದ್ದೀರಿ ಎಂದು ಆರೋಪಿಸಿದ ಸದಸ್ಯ ನಿಂಗರಾಜ ಅವರು, ಇದರ ಪಾರದರ್ಶಕತೆ ಪರೀಕ್ಷಿಸಲು ಈ ಕಡತವನ್ನು ಜಿಲ್ಲಾಧಿಕಾರಿಗಳ ಬಳಿ ಇರುವ ಅಭಿಯಂತರರಿಗೆ ಕಳಸಿರಿ ಎಂದು ಬಿಗಿ ನಿಲುವು ತಳೆದರು. ಆಗ ಬಿಜೆಪಿ ಸದಸ್ಯರಾದ ಪ್ರಕಾಶ ಬುರಡಿಕಟ್ಟಿ, ಪ್ರಕಾಶ ಪೂಜಾರ, ಮಲ್ಲಿಕಾರ್ಜುನ ಅಂಗಡಿ ಅವರು, ಬೇಕಾದವರಿಗೆ ಅಲ್ಲ ಕೆಲಸ ಮಾಡುವವರಿಗೆ ಕಾನೂನುರೀತ್ಯಾ ಕೊಡಲಾಗಿದೆ ಎಂದು ಆರೋಪದ ವಿರುದ್ದ ಅಧ್ಯಕ್ಷರ ಪರವಾಗಿ ಬ್ಯಾಟಿಂಗ್ ಮಾಡಿದಾಗ ಸದಸ್ಯರ ಮಧ್ಯ ಮಾತಿನ ಚಕಮಕಿ ನಡೆಯಿತು.

ಅಲ್ಲಿ ನಡೆದ ಕಾಮಗಾರಿಗಳ ನೈಪುಣ್ಯತೆ, ಭದ್ರತೆ ಮುಂತಾದವುಗಳ ಬಗ್ಗೆ ನಗರಸಭೆ ಅಭಿಯಂತರ ವಿಭಾಗವು ಪರೀಶೀಲನೆ ನಡೆಸಿ, ವಿವಿಧ ಸರ್ವೆ ನಂಬರ್‌ಗಳ ವಿನ್ಯಾಸಗಳಲ್ಲಿ ಮಾಡಲಾದ ಸಿವಿಲ್ ಅಭಿವೃದ್ಧಿ ಕಾಮಗಾರಿಗಳಿಗೆ ಮುಕ್ತಾಯ ಪ್ರಮಾಣ ಪತ್ರಗಳನ್ನು ಕೊಡುವಂತೆ ಸದಸ್ಯರಾದ ಶೇಖಪ್ಪ ಹೊಸಗೌಡ್ರ, ಪುಟ್ಟಪ್ಪ ಮರಿಯಮ್ಮನವರ, ನಿಂಗರಾಜ ಕೋಡಿಹಳ್ಳಿ ಮತ್ತಿತರರು ಸಲಹೆ ನೀಡಿದರು.

ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರ ಆರೋಪ, ಅಹವಾಲುಗಳಿಗೆ ಪೌರಾಯುಕ್ತ ಉದಯಕುಮಾರ, ಹಿರಿಯ ಅಭಿಯಂತರ ಎಂ.ಆರ್. ಗಿರಡ್ಡಿ ಅವರು ವಿವರಣೆ ನೀಡಿದರು. ಉಪಾಧ್ಯಕ್ಷೆ ಕಸ್ತೂರಿ ಚಿಕ್ಕಬಿದರಿ ವೇದಿಕೆಯಲ್ಲಿದ್ದರು.

### ಅಡ್ವಾನ್ಸ್ ಕಾಮಗಾರಿ ದಿನಚರಿ ಆಗಬಾರ್ದು....

**ಮಂತ್ರಿಗಳು ಬರುವಾಗ, ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ ಅಧ್ಯಕ್ಷರು ತಮ್ಮ ಅಧಿಕಾರ ಪ್ರಯೋಗಿಸಿ ಅವಶ್ಯ ಕಾಮಗಾರಿಗಳನ್ನು ಮಾಡಿಸಬಹುದು. ಆದರೆ ಅದೇ ದಿನಚರಿ ಆಗಬಾರದು ಎಂದು ಕಾಂಗ್ರೆಸ್ ಹಿರಿಯ ಸದಸ್ಯ ಪುಟ್ಟಪ್ಪ ಮರಿಯಮ್ಮನವರ ಅವರು, ಶೇಕಡಾ 90ರಷ್ಟಿದ್ದ ಕೌನ್ಸಿಲ್ ಮಂಜೂರಾತಿ ನಿರೀಕ್ಷಿಸಿದ ಇಂದಿನ ಸಭೆಯ ವಿಷಯಗಳ ಪಟ್ಟಿಯನ್ನು ಉಲ್ಲೇಖಿಸಿ ಕಡಕ ಮಾತುಗಳಲ್ಲಿ ಕುಟುಕಿದರು.**

# ತರಳಬಾಳು ಸಮುದಾಯ ಭವನಕ್ಕೆ ದೇಣಿಗೆ



ಮಲೇಬೆನ್ನೂರು, ಫೆ. 15- ಗೊಲ್ಲರಹಳ್ಳಿಯಲ್ಲಿ ನಿರ್ಮಾಣಗೊಂಡು ಮುಕ್ತಾಯ ಹಂತದಲ್ಲಿರುವ ಶ್ರೀ ತರಳಬಾಳು ಸಮುದಾಯ ಭವನಕ್ಕೆ ಮಲೇಬೆನ್ನೂರಿನ ಶಿವ ವಿವಿಧೋದ್ದೇಶ ಸಹಕಾರ ಸಂಘದಿಂದ ಮಂಗಳವಾರ 50 ಸಾವಿರ ರೂ.ಗಳನ್ನು ದೇಣಿಗೆಯಾಗಿ ನೀಡಿದರು.

ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್ ಅವರು ಹೊನ್ನಾಳಿ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಕೆ. ಕರೇಗೌಡಪ್ಪ ಅವರಿಗೆ ದೇಣಿಗೆಯ ಚೆಕ್ ನೀಡಿದರು.

ಈ ವೇಳೆ ಮಾತನಾಡಿದ ಸಮಾಜದ ಮುಖಂಡ ಹುಣಸಘಟ್ಟದ ಗದಿಗೇಶ್ ಅವರು, ನಮ್ಮ ಮನವಿ ಮೇರೆಗೆ ಮಲೇಬೆನ್ನೂರಿನ ಶಿವ ಸಹಕಾರ ಸಂಘದಿಂದ 50 ಸಾವಿರ ರೂ. ದೇಣಿಗೆ ನೀಡಿ ನೆರವಾಗಿದ್ದಾರೆ ಎಂದು ಕೃತಜ್ಞತೆ ಸಲ್ಲಿಸಿದರು.

ಹರಿಹರ ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಹೊನ್ನಾಳಿ ತಾಲ್ಲೂಕು ಸಾಧು ವೀರಶೈವ ಸಮಾಜದ ಮಾಜಿ ಅಧ್ಯಕ್ಷ ಬೆನಕಪ್ಪ ಗೌಡ್ರು, ಕಾರ್ಯದರ್ಶಿ ಸಣ್ಣಬಸಪ್ಪ, ಮುಖಂಡರಾದ ಯಕ್ಕನಹಳ್ಳಿ ಬಸವರಾಜಪ್ಪ, ಅರಕೆರೆ ಹನುಮಂತಪ್ಪ, ಬೆನಕನಹಳ್ಳಿ ರುದ್ರೇಶ್, ಅರಬಗಟ್ಟೆ ರಮೇಶ್, ಶಿವ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಯಲವಟ್ಟಿ ಆಂಜನೇಯ, ನಿರ್ದೇಶಕರಾದ ಹೆಚ್.ಜಿ. ಚಂದ್ರಶೇಖರ್, ಕೆ.ಜಿ. ರಂಗನಾಥ್, ಕುಂಬಳೂರಿನ ಹಲ್ಲುಮನಿ ಷಣ್ಮುಖಪ್ಪ, ಜಿಗಳಿ ಪ್ರಕಾಶ್, ಪಾನಿಪೂರಿ ಸಿದ್ದೇಶ್, ಮಲೇಬೆನ್ನೂರಿನ ಕೆ.ಜಿ. ವೀರನಗೌಡ, ಯಲವಟ್ಟಿ ಯೋಮಕೇಶ್ವರಪ್ಪ, ನಿಟ್ಟೂರು ಧನಂಜಯ ಇದ್ದರು.

## ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಲೇಔಟ್ ಎ ಬ್ಲಾಕ್ ಮತ್ತು ಬಿ ಬ್ಲಾಕ್, ಬಸವೇಶ್ವರ ಬಡಾವಣೆ, ಶಾಂತಿನಗರ, ಮಹಾಲಕ್ಷ್ಮಿ ಲೇಔಟ್, ಬಾಲಾಜಿ ನಗರ, ನಿಜಲಿಂಗಪ್ಪ ಲೇಔಟ್, ನೌಕರರ ಸಮುದಾಯ ಭವನ, ಅಥಣಿ ಕಾಲೇಜ್, ಎಂಬಿಎ ಕಾಲೇಜ್, ಆಫೀಸರ್ ಕ್ಲಬ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಅಕ್ಷರ ಸಂಸ್ಕಾರ ಮುಖ್ಯವಾಹಿನಿಗೆ ರಹದಾರಿ

## ಹರಪನಹಳ್ಳಿ : ಶೈಕ್ಷಣಿಕ ಅರಿವು ಕಾರ್ಯಕ್ರಮದಲ್ಲಿ ಬಿಸಿಎಂ ವಿಸ್ತರಣಾಧಿಕಾರಿ ಭೀಮಪ್ಪ



ಹರಪನಹಳ್ಳಿ, ಫೆ.15- ಕಾಣದ ದೈವಾಂಶ ಸಂಭೂತಗಳು ನಮ್ಮ ನೆರವಿಗೆ ಬರುವ ಮೂಲಕ ವರ ಕೊಡುತ್ತವೆ ಎಂದು ನಿರೀಕ್ಷಿಸುವುದನ್ನು ಬಿಟ್ಟು, ಅಕ್ಷರದ ಸಂಸ್ಕಾರ ಪಡೆಯುವ ಮೂಲಕ ನಾವು ಸಮಾಜದ ಮುಖ್ಯವಾಹಿನಿಗೆ ರಹದಾರಿ ಮಾಡಿಕೊಳ್ಳಬೇಕಾದ ಜರೂರು ಇದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿ ಕೆ. ಭೀಮಪ್ಪ ಅಭಿಪ್ರಾಯ ಪಟ್ಟರು.

ತಾಲ್ಲೂಕಿನ ಲಕ್ಷ್ಮಿಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸತ್ತೂರು ಗೊಲ್ಲರಹಟ್ಟಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಮ್ಮಿಕೊಂಡಿದ್ದ ಗೊಲ್ಲ, ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಶೈಕ್ಷಣಿಕ ಅರಿವು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಅವರು ಮಾತನಾಡಿದರು.


ವೈಜ್ಞಾನಿಕ ನಾಗಾಲೋಟದಲ್ಲಿ ಬೆಳವಣಿಗೆಯಾಗು ತ್ತಿದ್ದರೂ ಸಹ, ಇನ್ನೂ ನಮ್ಮಲ್ಲಿ ಮೂಢನಂಬಿಕೆಯೇ ಪ್ರಧಾನ ಪಾತ್ರ ನಿರ್ವಹಿಸುತ್ತಿದೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ ಎಂಬ ಮೌಢ್ಯತೆಯ ಸಂಕೋಲೆ ಒಳಗೆ ನಾವು ಜೀವಿಸುತ್ತಿದ್ದೇವೆ. ಶೋಷಿತ ಸಮುದಾಯ ಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಔದ್ಯೋಗಿಕವಾಗಿ ನಾವು ಪ್ರಾಬಲ್ಯ ಸಾಧಿಸಬೇಕಾದರೆ, ಶೈಕ್ಷಣಿಕ ಸಂಸ್ಕಾರವನ್ನು ನಾವು ನಮ್ಮ ಮಕ್ಕಳಿಗೆ ಚಾಚೂ ತಪ್ಪದೇ ಕೊಟ್ಟಾಗ ಮಾತ್ರ ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯ ಎಂದು ವಿಶ್ಲೇಷಿಸಿದರು.

ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಹನುಮಕ್ಕ ಪರಶು ರಾಮಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಉಪಾಧ್ಯಕ್ಷ ಎ.ಎನ್. ಕುಮಾರ್, ಸದಸ್ಯೆ ರೇಣುಕಮ್ಮ, ಇಲಾಖೆಯ ವಸತಿ ನಿಲಯದ ಮೇಲ್ವಿಚಾರಕ ಬಿ.ಎಚ್. ಚಂದ್ರಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಹೇಮಣ್ಣ, ಮುಖಂಡರಾದ ಹನುಮಂತಪ್ಪ, ದಾಸಣ್ಣ ಇತರರು ಪಾಲ್ಗೊಂಡಿದ್ದರು.

ನಯನ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಪಂಚಾಯ್ತಿ ಕರ ವಸೂಲಿಗಾರ ಮಂಜುನಾಥ ಕಾರ್ಯಕ್ರಮ ನಿರೂಪಿಸಿದರು.


॥ ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು॥

**ಗುರು-ಲಿಂಗ ಜಂಗಮ ಗಣಾರಾಧನೆ ಆಹ್ವಾನ**



**ಲಿಂ॥ ವೇ ಎನ್.ಎಂ.ಜೆ.ಬಿ. ಆರಾಧ್ಯರವರ ಸಹೋದರ,** ದಾವಣಗೆರೆ, ನಗರ ಎಂ.ಸಿ.ಸಿ. 'ಬಿ' ಬ್ಲಾಕ್, ಬಡಾವಣೆ ವಾಸಿ
**ಡಾ॥ ಹೆಚ್.ಎಂ. ವೀರಯ್ಯ, ಸಹೋದರರು ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ಆತ್ಮೀಯರೇ, ದಿ. : 12.02.2022ನೇ ಶನಿವಾರ ಬೆಳಿಗ್ಗೆ 09.35 ಗಂಟೆಗೆ ನಮ್ಮ ಅಣ್ಣನವರಾದ
**ವೇ॥ ಶ್ರೀ ಕೆ.ಎಂ. ಶಿವಲಿಂಗಯ್ಯನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಗುರು-ಲಿಂಗ ಜಂಗಮ ಗಣಾರಾಧನೆ'ಯನ್ನು**
**ದಿನಾಂಕ : 16.02.2022ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ದಾವಣಗೆರೆಯಲ್ಲಿರುವ ಶ್ರೀ ಸದ್ಯೋಜಾತ ಸ್ವಾಮಿಗಳವರ ಶಿವಾಚಾರ್ಯ ಭವನದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ, ತಾವೆಲ್ಲರೂ ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತ ಕುಟುಂಬದವರು : **ಶ್ರೀಮತಿ ಲಲಿತಮ್ಮ ಆರಾಧ್ಯ ಮತ್ತು ಮಕ್ಕಳು, ಶ್ರೀಮತಿ ಶ್ರೀ ಎನ್.ಜೆ. ಗುರುಸಿದ್ದಯ್ಯ ಮತ್ತು ಮಕ್ಕಳು, ಶ್ರೀಮತಿ ಶ್ರೀ ಎನ್.ಎಂ.ಎಸ್. ಜಯಪ್ರಕಾಶ್ ಮತ್ತು ಮಕ್ಕಳು, ಅಳಿಯಂದಿರು, ಶ್ರೀಮತಿ ಶ್ರೀ ಎನ್.ಎಂ.ಎಸ್. ಮಲ್ಲಿಕಾರ್ಜುನ್‌ಸ್ವಾಮಿ ಮತ್ತು ಮಕ್ಕಳು, ಆರಾಧ್ಯ ಸಹೋದರರು, ನರಗನಹಳ್ಳಿ ವಂಶಸ್ಥರು ಹಾಗೂ ಬಂಧು-ಮಿತ್ರರು.**
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಚಿರಸ್ಮರಣೆ**



**ದಿ. ಹೆಚ್.ಎಂ. ಪ್ರೇಮಕುಮಾರಿ ಹನಗೋಡಿ ಮಠ**
ನೀವು ನಮ್ಮನ್ನಗಲಿ ಇಂದಿಗೆ 21 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
**ಮಗಳು : ಶ್ರೀಮತಿ ಸುಮನ್ ವಿ. ಕಟಗಿಹಳ್ಳಿಮಠ**
**ಅಳಿಯ : ಶ್ರೀ ವಾಗೀಶ್ ಕಟಗಿಹಳ್ಳಿಮಠ,** ವಕೀಲರು
**ಮೊಮ್ಮಕ್ಕಳು : ಸೋಹನ್ ವಿ. ಕಟಗಿಹಳ್ಳಿಮಠ,** ವಕೀಲರು
**ಧವನ್ ವಿ. ಕಟಗಿಹಳ್ಳಿಮಠ**



**ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ**
ನಂ.657/1ಎ, ಮಂಡಿಪೇಟೆ, ದಾವಣಗೆರೆ - 577 001.
ದೂರವಾಣಿ : 08192-271537/234330

"ಕನಕ ಸಿರಿ" ವಿಶೇಷ ಬಾಂಡ್

**ಬ್ಯಾಂಕಿನ ರಜತ ಮಹೋತ್ಸವದ ಪ್ರಯುಕ್ತ "ಕನಕ ಸಿರಿ"** ವಿಶೇಷ ಬಾಂಡನ್ನು ಆಕರ್ಷಕ ಠೇವಣಿ ಬಡ್ಡಿ ನೀಡುವುದರ ಮೂಲಕ ಮತ್ತು ವಿಶೇಷವಾಗಿ **ದಿನದರ್ಶಿಕೆ-2022** ಬಿಡುಗಡೆ ಮಾಡಿದ್ದು, ನಮ್ಮ ಬ್ಯಾಂಕಿನ ಷೇರುದಾರರು ಗ್ರಾಹಕರು ಇದರ ಲಾಭವನ್ನು ಪಡೆಯುವ ಮೂಲಕ ಮತ್ತು ಬ್ಯಾಂಕಿನ ವ್ಯವಹಾರದಲ್ಲಿ ಭಾಗವಹಿಸಿ, ಪ್ರೋತ್ಸಾಹ ನೀಡಲು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.
2020-2021 ಸಾಲಿಗೆ ಲಾಭಾಂಶವನ್ನು ಸಹ ವಿತರಣೆ ಮಾಡಲಾಗುತ್ತಿದೆ. ಸದಸ್ಯರು ಗುರುತಿನ ಚೀಟಿ ತೋರಿಸಿ ಲಾಭಾಂಶ ಪಡೆಯಬಹುದಾಗಿದೆ ಮತ್ತು ಗುರುತಿನ ಚೀಟಿ ಇಲ್ಲದೇ ಇರುವವರು ಇತ್ತೀಚಿನ 3 ಭಾವಚಿತ್ರಗಳನ್ನು ತಂದು ಗುರುತಿನ ಚೀಟಿ ಮತ್ತು ಲಾಭಾಂಶ ಪಡೆಯಬಹುದಾಗಿದೆ.


**ಲೋಕಿಕೆರೆ ಸಿದ್ದಪ್ಪ**, ಅಧ್ಯಕ್ಷರು, ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,
**ಶ್ರೀಮತಿ ಕೆ.ಜಿ. ತಾಯಮ್ಮ**, ಉಪಾಧ್ಯಕ್ಷರು, ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,
**ಬಿ.ಎಲ್. ಗೌಡ**, ವ್ಯವಸ್ಥಾಪಕರು, ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,


## ನಗರದಲ್ಲಿ ಇಂದು ಸಾಮೂಹಿಕ ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಪ್ರತೀ ತಿಂಗಳ ಹುಣ್ಣಿಮೆಯಂದು ನಡೆಸುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜೆ ಭರತ ಹುಣ್ಣಿಮೆ ಅಂಗವಾಗಿ ಇಂದು ಬೆಳಿಗ್ಗೆ 7ಕ್ಕೆ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ॥ ಸುಶೀಲಮ್ಮ ತಿಳಿಸಿದ್ದಾರೆ.

ಕೆ. ನಾಗೇಶಪ್ಪ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

# ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜಿಲ್ಲೆಗೆ 23 ಕೋಟಿ ರೂ. ಅನುದಾನ



ದಾವಣಗೆರೆ, ಫೆ.15- ರಾಷ್ಟ್ರೀಯ ಕೃಷಿ ವಿಕಾಸ ಮತ್ತು ನಬಾರ್ಡ್ ಯೋಜನೆಯಡಿ ಕೃಷಿ ಇಲಾಖೆಯಿಂದ ಜಿಲ್ಲೆಯಲ್ಲಿ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಸುಮಾರು 23 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ತಿಳಿಸಿದ್ದಾರೆ.

ಸಮಗ್ರ ಕೃಷಿ ಪದ್ಧತಿಯನ್ನು ಉತ್ತೇಜಿಸುವ ಹಾಗೂ ಜನಪ್ರಿಯಗೊಳಿಸುವ ಉದ್ದೇಶದಿಂದ ಆವರಗೆರೆಯಲ್ಲಿ ಉತ್ಕೃಷ್ಟತಾ ಕೇಂದ್ರ ಹಾಗೂ ಕಾಡಜ್ಜಿಯಲ್ಲಿ ಸಂಶೋಧನಾ ಕೇಂದ್ರ ತೆರೆಯಲು ರೂ. 4.00 ಕೋಟಿ ಹೆಚ್ಚು ತರಕಾರಿ ಬೆಳೆಗಳನ್ನು ಬೆಳೆಯುವ ತಾಲ್ಲೂಕಿಗೆ ಶೀಥಲೀಕರಣ ಘಟಕದ ಅವಶ್ಯಕತೆ ತುಂಬಾ ಇದ್ದದ್ದನ್ನು ಮನಗಂಡು ಶೀಥಲೀಕರಣ ಘಟಕಕ್ಕೆ ಸಂಸದರು ಮನವಿ ಮಾಡಿದ್ದರು, ಈ ಹಿನ್ನೆಲೆಯಲ್ಲಿ ತಾಲ್ಲೂಕಿನ ಆವರಗೆರೆ ಶೀಥಲೀಕರಣ ಘಟಕ ನಿರ್ಮಾಣ ಮಾಡಲು ರೂ.9.50 ಕೋಟಿ ಅನುದಾನ ಮಂಜೂರಾಗಿದೆ.

ಹೊನ್ನಾಳಿ ತಾಲ್ಲೂಕಿನ ಹೆಚ್.ಕಡದಕಟ್ಟೆ ಗ್ರಾಮದಲ್ಲಿ ಸಮಗ್ರ ಕೃಷಿ ಪದ್ಧತಿ ಉತ್ತೇಜಿಸಲು ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರ ತೆರೆಯಲು 2.17 ಕೋಟಿ ಒದಗಿಸಲಾಗಿದೆ. ಉಳಿದಂತೆ ಕಾಡಜ್ಜಿಯಲ್ಲಿರುವ ಬೀಜೋತ್ಪಾದನೆ ಕ್ಷೇತ್ರದ ಬಲವರ್ಧನೆಗಾಗಿ 3.00 ಕೋಟಿ, ಮಾಯಕೊಂಡ ವಿಧಾನಸಭಾ ಕ್ಷೇತ್ರದ ತ್ಯಾವಣಿಗೆ ಬೀಜೋತ್ಪಾದನೆ ಕ್ಷೇತ್ರದ ಬಲವರ್ಧನೆಗಾಗಿ 1.50 ಕೋಟಿ, ಜಗಳೂರು ತಾಲ್ಲೂಕಿನ ಚಿಕ್ಕಬಂಟನಹಳ್ಳಿಯಲ್ಲಿರುವ ಬೀಜೋತ್ಪಾದನೆ ಕ್ಷೇತ್ರದ ಬಲವರ್ಧನೆಗಾಗಿ 1.55 ಕೋಟಿ. ಬಸವಾಪಟ್ಟಣ ಮತ್ತು ತ್ಯಾವಣಿಗೆಯಲ್ಲಿ ಹೊಸ ರೈತ ಸಂಪರ್ಕ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ತಲಾ 60 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅನುದಾನ ಒದಗಿಸಿರುವ ಕೇಂದ್ರ ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್, ರಾಜ್ಯ ರೈತ ಕಲ್ಯಾಣ ಸಚಿವರಾದ ಶೋಭಾ ಕರಂದ್ಲಾಜೆ ಹಾಗೂ ರಾಜ್ಯ ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರಿಗೆ ಸಂಸದ ಜಿ.ಎಂ.ಸಿದ್ದೇಶ್ವರ ಅಭಿನಂದನೆ ಸಲ್ಲಿಸಿದ್ದಾರೆ.

## ಹಳ್ಳೂರ್ ಇಂದುಮತಿ ನಿಧನ



ದಾವಣಗೆರೆ ಎಂಸಿಸಿ 'ಎ' ಬ್ಲಾಕ್ ಸಾಯಿಬಾಬಾ ದೇವಸ್ಥಾನದ ಪಕ್ಕದ ವಾಸಿ ಹಳ್ಳೂರ್ ಮಂಜುನಾಥ್ ಅವರ ಧರ್ಮಪತ್ನಿ ಹಳ್ಳೂರ್ ಇಂದುಮತಿ (62) ಅವರು ದಿನಾಂಕ 15.02.2022 ರ ಮಂಗಳವಾರ ಬೆಳಗಿನ ಜಾವ 4 ಗಂಟೆಗೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.2.2022ರ ಮಂಗಳವಾರ ಸಂಜೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

## ಮೇವು ಹಗರಣ : ಇನ್ನೊಂದು ಪ್ರಕರಣದಲ್ಲಿ ಲಾಲು ದೋಷಿ



ರಾಂಚಿ, ಫೆ. 15 – 139.5 ಕೋಟಿ ರೂ.ಗಳ ಡೊರಂಡ ಖಜಾನೆಯ ಮೇವು ಹಗರಣದಲ್ಲಿ ಆರ್. ಜೆ.ಡಿ. ಅಧ್ಯಕ್ಷ ಹಾಗೂ ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ದೋಷಿ ಎಂದು ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.

ಫೆಬ್ರವರಿ 18ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಾಗುವುದು ಎಂದು ಸಿಬಿಐ ಪರ ವಕೀಲರು ತಿಳಿಸಿದ್ದಾರೆ. ನ್ಯಾಯಾಲಯ ಪ್ರಕರಣದ ವಿಚಾರಣೆಯನ್ನು ಜನವರಿ 29ರಂದು ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿತ್ತು. ಇತರೆ ನಾಲ್ಕು ಮೇವು ಹಗರಣಗಳಲ್ಲಿ ಲಾಲು ಪ್ರಸಾದ್‌ಗೆ 14 ವರ್ಷಗಳ ಜೈಲು ಶಿಕ್ಷೆಯಾಗಿದೆ.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು

ಶ್ರೀ ಗುರು ಪುಟ್ಟರಾಜ ನಗರದ (ಬಾಡಾ ಕ್ರಾಸ್) ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಭರತ ಹುಣ್ಣಿಮೆ ಅಂಗವಾಗಿ ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವು ಇಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ.

## ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯವಲ್ಲ

ಚಾಮರಾಜನಗರ, ಫೆ. 15 – ಪದವಿ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯವಲ್ಲ. ವಿದ್ಯಾರ್ಥಿಗಳು ತಮ್ಮ ಇಷ್ಟದ ಉಡುಪು ಧರಿಸಬಹುದು. ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸ್ವಾತಂತ್ರ್ಯವಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದ್ದಾರೆ. ಆದರೆ, ಈ ಅವಕಾಶವನ್ನು ಯಾರೂ ದುರ್ಬಳಕೆ ಮಾಡಿಕೊಳ್ಳಬಾರದು ಎಂದೂ ಅವರು ಹೇಳಿದ್ದಾರೆ. ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯವಿದೆ ಎಂದವರು ತಿಳಿಸಿದ್ದಾರೆ.

## ಶಾಮನೂರು : ಮಾತೃಪೂರ್ಣ ಯೋಜನೆ ಬಿಸಿಯೂಟ ಕಾರ್ಯಕ್ರಮಕ್ಕೆ ಚಾಲನೆ



ದಾವಣಗೆರೆ,ಫೆ.15- ನಗರ ಪಾಲಿಕೆ 43ನೇ ವಾರ್ಡ್ ಶಾಮನೂರಿನ ಜನತಾ ಕಾಲೋನಿಯ ಬಿ. ಅಂಗನವಾಡಿ ಕೇಂದ್ರದಲ್ಲಿ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಮಾತೃ ಪೂರ್ಣ ಯೋಜನೆಯ ಬಿಸಿಯೂಟ ಕಾರ್ಯಕ್ರಮವನ್ನು ಸ್ಥಳೀಯ ಕಣ್ಣಾಳ ಅಂಜಿನಪ್ಪ ಅವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಾಪಣ್ಣ, ಎಬಿಸಿಡಿಇ ಅಂಗನವಾಡಿ ಕೇಂದ್ರದ ರೇಖಾ, ಅಂಜಿನಮ್ಮ, ನೇತ್ರ, ಮಂಗಳ, ದೀಪಾ, ಆರೋಗ್ಯ ಶುಶ್ರೂಷಕಿ ರೇಣುಕಮ್ಮ, ಸಹಾಯಕರಾದ ಮಂಜುಳ, ರೇಣುಕಮ್ಮ ಮತ್ತಿತರರು ಉಪಸ್ಥಿತರಿದ್ದರು.

## ಪ್ರಸನ್ನಾನಂದಪುರಿ ಶ್ರೀಗಳ ಹೋರಾಟಕ್ಕೆ ಹೆಚ್.ಎಸ್. ಶಿವಶಂಕರ್ ಬೆಂಬಲ



ಹರಿಹರ, ಫೆ. 15 - ವಾಲ್ಮೀಕಿ ಸಮುದಾಯಕ್ಕೆ ಶೇ 7.5 ಮೀಸಲಾತಿ ನೀಡುವಂತೆ ಒತ್ತಾಯಿಸಿ, ಹರಿಹರದ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ ಯವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ನಾಲ್ಕನೇ ದಿನದಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು ಶ್ರೀಗಳನ್ನು ಭೇಟಿ ಮಾಡಿ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ.

# ಪ್ರಜ್ವಲ್ ರೇವಣ್ಣ ಅಕ್ರಮ ಆಸ್ತಿ ವಿಚಾರಣೆಗೆ ಸುಪ್ರೀಂ ಅನುಮತಿ



ಬೆಂಗಳೂರು, ಫೆ. 15 - ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ದೇವೇಗೌಡರ ಮೊಮ್ಮಗ ಹಾಗೂ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸುಪ್ರೀಂಕೋರ್ಟ್ ಶಾಕ್ ನೀಡಿದ್ದು, ಅವರ ವಿರುದ್ಧದ ವಿಚಾರಣೆಗೆ ಗ್ರೀನ್ ಸಿಗ್ನಲ್ ನೀಡಿದೆ.

ಈ ಸಂಬಂಧ ವಕೀಲ ದೇವರಾಜೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾ ಮಾಡಿದ್ದ ಹೈಕೋರ್ಟ್‌ಗೆ ಸೂಚನೆ ನೀಡಿರುವ ಸುಪ್ರೀಂಕೋರ್ಟ್, ಪ್ರಜ್ವಲ್ ರೇವಣ್ಣ ವಿರುದ್ಧದ ವಿಚಾರಣೆಯನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಿದೆ.

ಪ್ರಜ್ವಲ್ ರೇವಣ್ಣ ಅವರಿಗೆ ಹದಿನೈದು ವರ್ಷ, ಆರು ತಿಂಗಳುಗಳಾಗಿದ್ದ ಸಂದರ್ಭದಲ್ಲೇ ಇಪ್ಪತ್ಮೂರು ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದರು ಎಂದು ಆರೋಪಿಸಿ, ಈ ಹಿಂದೆ ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಿದ್ದರು.

ಹೀಗೆ ಇಪ್ಪತ್ಮೂರು ಕೋಟಿ ರೂಪಾಯಿಗಳಷ್ಟು ಭಾರೀ ಆಸ್ತಿ ಹೊಂದಲು ಅವರಿಗೆ ಯಾವುದೇ ಆದಾಯ ಮೂಲಗಳಿಲ್ಲ. ಅದೇ ರೀತಿ ಇರುವ ಆಸ್ತಿಗೆ ಸಂಬಂಧಿಸಿದಂತೆ ಪಾನ್ ಕಾರ್ಡ್ ಇಲ್ಲ, ಆದಾಯ ತೆರಿಗೆ ಇಲಾಖೆಗೆ ಮಾಹಿತಿ ಸಲ್ಲಿಸಿಲ್ಲ.

ಸಂಸತ್ ಚುನಾವಣೆಗೆ ಸ್ಪರ್ಧಿಸಲು ನಾಮಪತ್ರ ಸಲ್ಲಿಸುವಾಗ ಈ ಕುರಿತು ಪ್ರಜ್ವಲ್ ರೇವಣ್ಣ ಯಾವ ಮಾಹಿತಿಯನ್ನೂ ನೀಡಿಲ್ಲ, ಅವರ ಬ್ಯಾಂಕ್ ಖಾತೆಯಲ್ಲಿ ಇರುವ ಹಣಕ್ಕೂ, ಅವರು ನೀಡಿರುವ ಮಾಹಿತಿಗೂ ಸಂಬಂಧವೇ ಇಲ್ಲ. ಹಾಗೆಯೇ ಗೋಮಾಳಗಳನ್ನು ಪ್ರಜ್ವಲ್ ರೇವಣ್ಣ ಹೆಸರಿಗೆ ಬರೆಸಲಾಗಿದೆ, ಹೀಗಾಗಿ ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ವಿರುದ್ಧ ವಿಚಾರಣೆ ನಡೆಸಬೇಕು ಎಂದು ವಕೀಲ ದೇವರಾಜೇಗೌಡ ಹೈಕೋರ್ಟ್ ಮೊರೆ ಹೋಗಿದ್ದರು.

ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದ್ದು, ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ವಕೀಲ ದೇವರಾಜೇಗೌಡ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು.

ಮೇಲ್ಮನವಿ ಅರ್ಜಿಯನ್ನು ವಿಚಾರಣೆಗೆತ್ತಿಕೊಂಡ ಸುಪ್ರೀಂಕೋರ್ಟ್, ಈ ಹಿಂದೆ ಹೈಕೋರ್ಟ್ ನೀಡಿದ್ದ ಆದೇಶವನ್ನು ತಡೆಹಿಡಿಯಿತಲ್ಲದೆ, ಈ ಪ್ರಕರಣ ವಿಚಾರಣೆಗೆ ಅರ್ಹವಾಗಿದೆ, ವಿಚಾರಣೆಗೆ ಎತ್ತಿಕೊಳ್ಳುವಂತೆ ಹೈಕೋರ್ಟ್‌ಗೆ ಸೂಚಿಸಿತು.

ಪ್ರಜ್ವಲ್ ರೇವಣ್ಣ ವಿರುದ್ಧದ ವಿಚಾರಣೆಗೆ ಸುಪ್ರೀಂಕೋರ್ಟ್ ಗ್ರೀನ್ ಸಿಗ್ನಲ್ ನೀಡುತ್ತಿದ್ದಂತೆಯೇ ವಿಧಾನಸೌಧದಲ್ಲಿಂದು ಸುದ್ದಿಗಾರರ ಜತೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ನಮಗೂ, ಪ್ರಜ್ವಲ್ ರೇವಣ್ಣ ಕುಟುಂಬಕ್ಕೂ ಯಾವುದೇ ವ್ಯಾವಹಾರಿಕ ನಂಟಿಲ್ಲ ಎಂದರು.

ಹದಿನೈದಿಪ್ಪತ್ತು ವರ್ಷಗಳ ಹಿಂದೆಯೇ ನಾವು ಬೇರೆ, ಬೇರೆಯಾಗಿದ್ದೇವೆ, ಅವರ ವಿಷಯದ ಬಗ್ಗೆ ನಮಗೆ ಏನೂ ಗೊತ್ತಿಲ್ಲ, ಅವರು ಕೂಡಾ ನಮಗೆ ಯಾವ ಮಾಹಿತಿ ನೀಡಿಲ್ಲ ಎಂದು ಕುಮಾರಸ್ವಾಮಿ ವಿವರಿಸಿದರು. ತೀರ್ಪಿನ ಹಿನ್ನೆಲೆಯಲ್ಲಿ ಮಾಡಬೇಕಾದ ಕಾನೂನು ಹೋರಾಟವನ್ನು ಅವರ ಕುಟುಂಬ ಮಾಡುತ್ತದೆ ಎಂದರು.

# ಕುತೂಹಲವೇ ಜೀವನಕ್ಕೆ ಸ್ಫೂರ್ತಿ

## ವಿಜ್ಞಾನ ಗೋಷ್ಠಿ ಕಾರ್ಯಕ್ರಮದಲ್ಲಿ ತರಳಬಾಳು ಸ್ವಾಮೀಜಿ



ಸಿರಿಗೆರೆ, ಫೆ.15- ವಿಜ್ಞಾನದಿಂದಲೇ ನಮಗೆ ಪಾಣಿನಿ ತಂತ್ರಾಂಶ ರೂಪಿಸಲು ಸಾಧ್ಯವಾಯಿತು. ಇದನ್ನು ನಾವು 1994 ರಲ್ಲಿ ರೂಪಿಸಿದೆವು. ಇದು 8 ಅಧ್ಯಾಯಗಳನ್ನು ಹಾಗೂ 4000 ತಂತ್ರಾಂಶಗಳನ್ನು ಒಳಗೊಂಡಿದೆ. ಒಂದು ಭಾಷೆಯ ವ್ಯಾಕರಣವನ್ನು ಈ ರೀತಿಯಲ್ಲಿ ವಿವರಿಸುವ ಮತ್ತೊಂದು ಕೃತಿಯು ವಿಶ್ವದ ಯಾವುದೇ ಇತರೆ ಭಾಷೆಗಳಲ್ಲಿ ಕಂಡುಬರುವುದಿಲ್ಲ. ತರ್ಕಬದ್ಧವಾದ ಈ ಕೃತಿಯನ್ನು ಕಂಪ್ಯೂಟರ್‌ಗೆ ಅಳವಡಿಸಿರುವುದು ವಿಶಿಷ್ಟ ಮತ್ತು ಸಮಂಜಸ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಇಲ್ಲಿನ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ತರಳಬಾಳು ಹುಣ್ಣಿಮೆಯ ಪ್ರಯುಕ್ತ ಎರಡನೇ ದಿನ ನಡೆದ ವಿಜ್ಞಾನ ಗೋಷ್ಠಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕೇವಲ ಸಂಸ್ಕೃತ ಭಾಷೆಗೆ ಸೀಮಿತವಾಗಿರದೆ ಕನ್ನಡದಲ್ಲೂ ಸಹ ಶಿವ ಸಾಫ್ಟ್‌ವೇರ್ ಮೂಲಕ ಕನ್ನಡದಲ್ಲಿ ಎಲ್ಲ ಶರಣರ ಹೆಸರುಗಳು ಹಾಗೂ ವಚನಗಳನ್ನು ಒಳಗೊಂಡಂತಹ 'ಗಣಕ ವಚನ ಸಂಪುಟ' ತಂತ್ರಾಂಶ ರೂಪಿಸಿದ್ದೇವೆ. ಪ್ರಾಚೀನ ಜ್ಞಾನದ ಜೊತೆಗೆ ಆಧುನಿಕ ವಿಜ್ಞಾನ ಸೇರಿ ಈ ತಂತ್ರಜ್ಞಾನ ರೂಪಿಸಲು ಸಾಧ್ಯವಾಯಿತು ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಧಾರವಾಡದ ಮಹೇಶ್ ಮಾಸಾಳ್, ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನ ಎಂಬ ವಿಷಯದ ಬಗ್ಗೆ ಮಾತನಾಡಿ, ವಿದ್ಯಾರ್ಥಿಗಳು ಪ್ರಶ್ನೆ ಮಾಡುವ ಗುಣ ಬೆಳೆಸಿಕೊಳ್ಳಿ ಹಾಗೂ ನಿಮಗೆ ಜೀವನದಲ್ಲಿ ಏನನ್ನಾದರೂ ಸಾಧಿಸುವ ಹುಚ್ಚು, ಕಿಚ್ಚು ಇರಬೇಕು ಎಂದು ತಿಳಿಸಿದರು.

ಕರ್ನಾಟಕ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕ ಡಾ. ಎಸ್.ಎಮ್. ಶಿವಪ್ರಸಾದ್, ವಿಜ್ಞಾನ ಕಲಿಕೆಯ ವಿಸ್ಮಯ ಎಂಬ ವಿಷಯದ ಬಗ್ಗೆ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕಲ್ಪನಾಶಕ್ತಿ ಮುಖ್ಯ. ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಸಾಧಿಸುವ ಹಂಬಲ ಇರಬೇಕು. ಶಿಕ್ಷಕರಿಗೆ ಪ್ರಶ್ನೆ ಕೇಳುವ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ಇರಬೇಕು ಎಂದು ಕಿವಿ ಮಾತು ಹೇಳಿದರು.

ರಾಜ್ಯ ವಿಜ್ಞಾನ ಪರಿಷತ್ ಕಾರ್ಯಕಾರಿ ಸದಸ್ಯ ಎಚ್.ಎಸ್.ಟಿ.ಸ್ವಾಮಿ ಮಾತನಾಡಿ, ಪ್ರತಿಯೊಬ್ಬರೂ ವೈಜ್ಞಾನಿಕ ಆಲೋಚನಾ ಕ್ರಮಗಳನ್ನು ರೂಢಿಸಿಕೊಂಡರೆ ನಮ್ಮ ಬದುಕು ಯಶಸ್ಸಿನತ್ತ ಸಾಗುತ್ತದೆ ಎಂದರು. ಪ್ರೊ. ಎಸ್.ಬಿ. ರಂಗನಾಥ್, ಡಾ. ಹೆಚ್.ವಿ. ವಾಮದೇವಪ್ಪ ಉಪಸ್ಥಿತರಿದ್ದರು.

# ಆಪ್ಟಿಕಲ್ ಫೈಬರ್ ಕಾಮಗಾರಿ ನಂತರವೇ ರಸ್ತೆ ನಿರ್ಮಾಣ: ಸಿಎಂ ಬೊಮ್ಮಾಯಿ

ಬೆಂಗಳೂರು, ಫೆ. 15 - ರಾಜ್ಯದಲ್ಲಿ ಆಪ್ಟಿಕಲ್ ಫೈಬರ್ ಸೇರಿದಂತೆ ಇತರೆ ಕಾಮಗಾರಿಗಳು ನಡೆಯುತ್ತಿದ್ದು, ಎಲ್ಲ ಅಳವಡಿಕೆಗಳು ಪೂರ್ಣಗೊಂಡ ನಂತರವೇ ರಸ್ತೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲು ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಭೈರತಿ ಸುರೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಆಪ್ಟಿಕಲ್ ಫೈಬರ್ ಅಳವಡಿಸುವುದು, ನೀರಿನ ಪೈಪ್ ಹಾಕುವುದು ಸೇರಿದಂತೆ ವಿವಿಧ ಕೆಲಸಗಳಿಗಾಗಿ ಪುನಃ ರಸ್ತೆ ಅಗೆಯುವ ಕೆಲಸ ನಡೆಯುತ್ತಿದೆ, ಈ ಪರಿಪಾಠವನ್ನು ನಿಲ್ಲಿಸಲಾಗುವುದು ಎಂದರು.

ಇನ್ನು ಮುಂದೆ ವಿದ್ಯುತ್ ಇಲಾಖೆ, ಜಲಮಂಡಳಿ ಸೇರಿದಂತೆ ಯಾರೇ ಕಾಮಗಾರಿ ಕೈಗೆತ್ತಿಕೊಳ್ಳುವ ಬಗ್ಗೆ ಮುಂಚಿತವಾಗಿ ತಿಳಿಸಬೇಕು, ನಂತರವೇ ರಸ್ತೆ ನಿರ್ಮಾಣ ಕಾರ್ಯ ನಡೆಯಬೇಕು ಎಂದವರು ಹೇಳಿದರು.

ಇದೇ ರೀತಿ ಒಂದು ಬಾರಿ ರಸ್ತೆ ನಿರ್ಮಿಸಿದ ಮೇಲೆ ಕನಿಷ್ಠ ಎರಡು ವರ್ಷಗಳ ಕಾಲ ಮತ್ತೆ ರಸ್ತೆ ಅಗೆಯಬಾರದು ಎಂಬ ನಿಯಮವಿದ್ದರೂ, ಇದು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಆದರೆ, ಇನ್ನು ಮುಂದೆ ಇದು ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳಲಿದೆ ಎಂದರು.

ಇದೇ ರೀತಿ, ಆಪ್ಟಿಕಲ್ ಫೈಬರ್ ಅಳವಡಿಕೆಯ ನಂತರ ಸಂಬಂಧಿಸಿದ ಸಂಸ್ಥೆಯೇ ರಸ್ತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

## ರಾಣೇಬೆನ್ನೂರಿನ ಬನಶಂಕರಿ ದೇವಸ್ಥಾನದಲ್ಲಿ ಇಂದು

ಪ್ರಾಚೀನ ಬನಶಂಕರಿ ದೇವಸ್ಥಾನದಲ್ಲಿ ಇಂದು ಶ್ರೀ ಚಂಡಿಕಾ ಹೋಮ, ಪೂರ್ಣಾಹುತಿ ನಂತರ ಶಿರಹಟ್ಟಿ ಪಕ್ಕೀರೇಶ್ವರ ಮಠದ ನೂತನ ಜಗದ್ಗುರು ಶ್ರೀ ಪಕ್ಕೀರ ದಿಂಗಾಲೇಶ್ವರ ಸ್ವಾಮಿಗಳು ಹಾಗೂ ಲಿಂಗನಾಯ್ಕನಹಳ್ಳಿ ಚನ್ನವೀರ ಶ್ರೀಗಳ ಸಾನ್ನಿಧ್ಯ, ರುದ್ರಪ್ಪ ಕಮ್ಮಾರ ಅಧ್ಯಕ್ಷತೆಯಲ್ಲಿ ಧರ್ಮಸಭೆ ನಡೆಯಲಿದೆ ಎಂದು ಸಮಿತಿ ಅಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ತಿಳಿಸಿದ್ದಾರೆ.

## 18 ರಿಂದ ಕಸಾಪ ಪರೀಕ್ಷೆಗಳು ಪ್ರಾರಂಭ

ದಾವಣಗೆರೆ, ಫೆ. 15- ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 2021-22ನೇ ಸಾಲಿನ ಕನ್ನಡ ಪ್ರವೇಶ ಕಾವ, ಜಾಣ, ರತ್ನ ಪರೀಕ್ಷೆಗಳನ್ನು ಕೋವಿಡ್ 19ರ ಮಾರ್ಗಸೂಚಿಯಂತೆ ಇದೇ ದಿನಾಂಕ 18, 19 ಮತ್ತು 20 ರಂದು 3 ದಿನಗಳ ಕಾಲ ರಾಜ್ಯದ 19 ಕೇಂದ್ರಗಳಲ್ಲಿ ನಡೆಸಲಾಗುವುದು.

ಹೆಚ್ಚಿನ ಮಾಹಿತಿಗೆ ವಿದ್ಯಾರ್ಥಿಗಳು ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-18 ಇವರನ್ನು ಅಥವಾ ಸಹಾಯವಾಣಿ ಸಂಖ್ಯೆ 080 26623584, 26612991 ಹಾಗೂ ವೆಬ್‌ಸೈಟ್ ವಿಳಾಸ www.kasapa.in ಗೆ ಸಂಪರ್ಕಿಸಬಹುದಾಗಿದೆ.

# ಶಿಬಾರ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಇಂದಿನಿಂದ ಭರತ ಹುಣ್ಣಿಮೆ ವಿಶೇಷ ಕಾರ್ಯಕ್ರಮ

ದಾವಣಗೆರೆಯ ಕೊಂಡಜ್ಜಿ ರಸ್ತೆಯಲ್ಲಿರುವ ಶಿಬಾರ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 21 ರವರೆಗೆ ಭರತ ಹುಣ್ಣಿಮೆ ಅಂಗವಾಗಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಇಂದು ಬೆಳಿಗ್ಗೆ ಧ್ವಜಾರೋಹಣದೊಂದಿಗೆ ಶ್ರೀ ಸ್ವಾಮಿಗೆ ರುದ್ರಾಭಿಷೇಕ ನಂತರ ಹೂವಿನ ಅಲಂಕಾರ, ರಾತ್ರಿ 7-30 ಕ್ಕೆ ನಗರದ ಪ್ರಮುಖ ರಾಜಬೀದಿಗಳ ಮುಖಾಂತರ ಬಿರುಸು-ಬಾಣ ಮತ್ತು ಸಕಲ ವಾದ್ಯಗಳೊಂದಿಗೆ ಶ್ರೀ ಸ್ವಾಮಿಯ ಮೆರವಣಿಗೆ, ದೋಣಿ ತುಂಬುವುದು ಮತ್ತು ಪರವು ನಡೆಯುವುದು.

ನಾಳೆ ಗುರುವಾರ ಬೆಳಿಗ್ಗೆ 6 ಗಂಟೆಗೆ ಪಂಚಾಮೃತ ಅಭಿಷೇಕ, ಕುದುರೆ ಪೂಜೆ, ನಂತರ ಹೂವಿನ ಅಲಂಕಾರದೊಂದಿಗೆ ಪೂಜಾ ಕಾರ್ಯಕ್ರಮ ರಾತ್ರಿ 8 ಗಂಟೆಗೆ ಭಕ್ತರಿಂದ 'ಶ್ರೀ ಮಾಲತೇಶ ಸ್ವಾಮಿ ದೇವರಗುಡ್ಡದ ಪರವು' ಕಾರ್ಯಕ್ರಮ.

ದಿನಾಂಕ 18 ರಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ತ್ರಿಶೂಲ ಪೂಜೆ, ಹೂವಿನ ಅಲಂಕಾರ, ಸಂಜೆ 5-30 ಕ್ಕೆ ಮೈಲಾರದಲ್ಲಿ ಕಾರಣಿಕೋತ್ಸವ ರಾತ್ರಿ ಅಖಂಡ ಭಜನೆ ಇರಲಿದೆ. ದಿನಾಂಕ 21ರಂದು ರಾತ್ರಿ 8 ಗಂಟೆಗೆ ನಗರದ ರಾಜಬೀದಿಗಳಲ್ಲಿ ಶ್ರೀ ಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯುವುದು.

ಸುಮಾರು 7 ಕೋಟಿಗೂ ಅಧಿಕ ವೆಚ್ಚದಲ್ಲಿ ನಿರ್ಮಾಣ ಆಗುತ್ತಿರುವ ಶ್ರೀಕ್ಷೇತ್ರ ಶಿಬಾರ ಮೈಲಾರಂಗೇಶ್ವರ ದೇವಸ್ಥಾನ ನಿರ್ಮಾಣಕ್ಕೆ ಭಕ್ತರು ತನು, ಮನ, ಧನ ನೀಡುವಂತೆ ದೇವಸ್ಥಾನ ಸಮಿತಿ ಕೋರಿದೆ.

**ನಮೂನೆ - XII**

ನಿಯಮ 14 (3)ನ್ನು ನೋಡಿ

## ಚುನಾವಣಾ ಸೂಚನೆ

ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು, ಇವರ ಕಛೇರಿ ಆದೇಶ ಸಂಖ್ಯೆ, ಜೆಆರ್‌ಬಿ/ಚುನಾವಣೆ/ರಿಆನೇ/ಆಮಂ/ಸಿಆರ್-2:81/2021-22, ದಿನಾಂಕ:17-12-2021ರನ್ವಯ **ಶ್ರೀ ಹರಿಹರೇಶ್ವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಹರಿಹರ.** ಈ ಬ್ಯಾಂಕಿನ ಮಂಡಳಿ ನಿರ್ದೇಶಕರ ಚುನಾವಣೆಯನ್ನು ದಿನಾಂಕ : 31.01.2022 ರಂದು ನಿಗದಿಪಡಿಸಿದ್ದು, ಆದರೆ ಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು ಇವರ ದಿನಾಂಕ : 20.01.2022ರ ಸುತ್ತೋಲೆಯಂತೆ ಮುಂದೂಡಲಾಗಿತ್ತು. ಆದರೆ ಪುನಃ ಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು ಇವರ ಸುತ್ತೋಲೆ ಕ್ರಮಾಂಕ : ಸಚುಪ್ರಾ/ಆಡಳಿತ,ಕೋವಿಡ್-19/6(6)/ಸುತ್ತೋಲೆ/2022 ದಿನಾಂಕ : 11/02/22ರಂತೆ ಸದರಿ ಬ್ಯಾಂಕಿನ ಚುನಾವಣೆಯನ್ನು ಯಾವ ಹಂತದಲ್ಲಿ ಮುಂದೂಡಲಾಗಿತ್ತೋ ಅದೇ ಹಂತದಿಂದ ಮುಂದಿನ 5 ವರ್ಷಗಳ ಅವಧಿಯ ಬ್ಯಾಂಕಿನ ಮಂಡಳಿ ನಿರ್ದೇಶಕರ ಚುನಾವಣೆಯನ್ನು ಶ್ರೀ ರೇಣುಕಾ ಮಂದಿರ, ದೇವಸ್ಥಾನದ ರಸ್ತೆ, ಕುಂಬಾರ ಓಣಿ, ಹರಿಹರದಲ್ಲಿ ದಿನಾಂಕ : 26.02.2022 ರಂದು ಶನಿವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 04.00 ಗಂಟೆಯವರೆಗೆ ಜರುಗಿಸಲಾಗುವುದೆಂದು ನೀಡಲಾದ ನೋಟೀಸು.

## ಚುನಾವಣಾ ವೇಳಾಪಟ್ಟಿ

ಚುನಾಯಿಸತಕ್ಕ ನಿರ್ದೇಶಕರುಗಳ ಒಟ್ಟು 13 ಸ್ಥಾನಗಳು, ಇದರಲ್ಲಿ ಸಾಮಾನ್ಯ-07 ಸ್ಥಾನಗಳು,ಪರಿಶಿಷ್ಟ ಜಾತಿ-01 ಸ್ಥಾನ, ಪರಿಶಿಷ್ಟ ಪಂಗಡ-01 ಸ್ಥಾನ, ಮಹಿಳಾ ಸದಸ್ಯರಿಗೆ-02 ಸ್ಥಾನಗಳು, ಹಿಂದುಳಿದ ಪ್ರವರ್ಗದ -02 ಸ್ಥಾನಗಳಲ್ಲಿ ಹಿಂದುಳಿದ ಪ್ರವರ್ಗ "ಎ" 01 ಸ್ಥಾನ, ಹಿಂದುಳಿದ ಪ್ರವರ್ಗ "ಬಿ" 01 ಸ್ಥಾನ ಮೀಸಲಿರಿಸತಕ್ಕದ್ದು.

| ಕ್ರ ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ, ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 1. | ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ | ದಿನಾಂಕ 17-02-2022ನೇ ಗುರುವಾರ ಬೆಳಿಗ್ಗೆ 11.00ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | 14 (ಎ) | ಬ್ಯಾಂಕಿನ ಕಚೇರಿಯಲ್ಲಿ, ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿಗಳಿಗೆ/ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಂದ |
| 2. | ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ | ದಿನಾಂಕ 18-02-2022ನೇ ಶುಕ್ರವಾರ ಬೆಳಿಗ್ಗೆ 11-00ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | 14 (ಎ) | ಬ್ಯಾಂಕಿನ ಕಚೇರಿಯಲ್ಲಿ, ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿಗಳಿಗೆ/ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಂದ |
| 3. | ಚುನಾವಣಾಧಿಕಾರಿಗಳಿಂದ ನಾಮಪತ್ರಗಳ ಪರಿಶೀಲನೆ | ದಿನಾಂಕ 19-02-2022ನೇ ಶನಿವಾರ ಬೆಳಿಗ್ಗೆ 11.00ರಿಂದ ಪರಿಶೀಲನೆ ಮುಗಿಯುವವರೆಗೂ | 14 (ಎ) | ಬ್ಯಾಂಕಿನ ಕಚೇರಿಯಲ್ಲಿ, ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿಗಳಿಗೆ/ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಂದ |
| 4. | ಚುನಾವಣಾಧಿಕಾರಿಗಳಿಂದ ಕ್ರಮಬದ್ಧವಾಗಿ ನಾಮನಿರ್ದೇಶನಗೊಂಡ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ 19-02-2022ನೇ ಶನಿವಾರ ನಾಮಪತ್ರಗಳ ಪರಿಶೀಲನೆ ನಂತರ | 14ಬಿ (4) | ಬ್ಯಾಂಕಿನ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 5. | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ನಾಮಪತ್ರವನ್ನು ವಾಪಾಸ್ಸು ಪಡೆಯಲು ಕೊನೆಯ ದಿನಾಂಕ | ದಿನಾಂಕ 20-02-2022ನೇ ಭಾನುವಾರ ಮಧ್ಯಾಹ್ನ 3.00 ಗಂಟೆಯವರೆಗೆ | 14 (ಸಿ) | ಬ್ಯಾಂಕಿನ ಕಚೇರಿಯಲ್ಲಿ, ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿಗಳಿಗೆ/ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಂದ |
| 6. | ಚುನಾವಣಾಧಿಕಾರಿಗಳಿಂದ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ 20-02-2022ನೇ ಭಾನುವಾರ ಮಧ್ಯಾಹ್ನ 3.00 ನಂತರ | 14 (ಡಿ) | ಬ್ಯಾಂಕಿನ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 7. | ಚುನಾವಣಾಧಿಕಾರಿಗಳಿಂದ (ಅವಶ್ಯವಿದ್ದಲ್ಲಿ) ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡಲಾಗುವುದು. | ದಿನಾಂಕ 20-02-2022ನೇ ಭಾನುವಾರ ಮಧ್ಯಾಹ್ನ 4.30 ಗಂಟೆಗೆ | 14 (ಇ) | ಬ್ಯಾಂಕಿನ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 8. | ಸ್ಪರ್ಧಿಸುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ಪ್ರಕಟಿಸುವುದು. | ದಿನಾಂಕ 22-02-2022 ನೇ ಮಂಗಳವಾರ ಮಧ್ಯಾಹ್ನ 4.30 ಗಂಟೆ ನಂತರ | 14 (ಇ) ಮತ್ತು 14 (ಎಫ್) | ಬ್ಯಾಂಕಿನ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 9. | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ 26-02-2022ನೇ ಶನಿವಾರ ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 4.00 ಗಂಟೆಯವರೆಗೆ | 14 (ಜಿ) | ಶ್ರೀ ರೇಣುಕಾ ಮಂದಿರ, ದೇವಸ್ಥಾನ ರಸ್ತೆ, ಕುಂಬಾರ ಓಣಿಯಲ್ಲಿ ಚುನಾವಣಾಧಿಕಾರಿಗಳಿಂದ ಹಾಗೂ ನೇಮಕಗೊಂಡ ಸಿಬ್ಬಂದಿಯವರಿಂದ |
| 10. | ಮತಗಳ ಎಣಿಕೆ ದಿನಾಂಕ ಮತ್ತು ಸಮಯ | ದಿನಾಂಕ 26-02-2022ನೇ ಶನಿವಾರ ಮತದಾನ ಮುಗಿದ ನಂತರ | 14 (ಹೆಚ್) | ಶ್ರೀ ರೇಣುಕಾ ಮಂದಿರ, ದೇವಸ್ಥಾನ ರಸ್ತೆ, ಕುಂಬಾರ ಓಣಿಯಲ್ಲಿ ಚುನಾವಣಾಧಿಕಾರಿಗಳಿಂದ ಹಾಗೂ ನೇಮಕಗೊಂಡ ಸಿಬ್ಬಂದಿಯವರಿಂದ |
| 11. | ಚುನಾವಣಾಧಿಕಾರಿಗಳಿಂದ ಚುನಾವಣೆ ಫಲಿತಾಂಶ ಘೋಷಣೆ | ದಿನಾಂಕ 26-02-2022ನೇ ಶನಿವಾರ ಮತಗಳ ಎಣಿಕೆ ಮುಗಿದ ನಂತರ | 14 (ಐ) | ಶ್ರೀ ರೇಣುಕಾ ಮಂದಿರ, ದೇವಸ್ಥಾನ ರಸ್ತೆ, ಕುಂಬಾರ ಓಣಿಯಲ್ಲಿ ಚುನಾವಣಾಧಿಕಾರಿಗಳಿಂದ ಹಾಗೂ ನೇಮಕಗೊಂಡ ಸಿಬ್ಬಂದಿಯವರಿಂದ |

**ಸಹಿ/- ಚುನಾವಣಾಧಿಕಾರಿ**

ಶ್ರೀ ಹರಿಹರೇಶ್ವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಹರಿಹರ.
ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ ತಾಲ್ಲೂಕು, ಹರಿಹರ.

**ಸ್ಥಳ : ಹರಿಹರ.**
**ದಿನಾಂಕ : 11-02-2022**

Hero

ಸತತ 18ನೇ ವರ್ಷದ ನಿಮ್ಮ ಸೇವೆಯಲ್ಲಿ...

ಪ್ರಕಾಶಾ ಮೋಟರ್ಸ್

ಕಳೆದ 17 ವರ್ಷಗಳ ಅವಧಿಯಲ್ಲಿ ಗ್ರಾಹಕರು ಕೊಟ್ಟ-ಕೊಡುತ್ತಿರುವ ಸಹಕಾರದಿಂದ ಇಂದು ಬೃಹತ್ ಉದ್ಯಮವಾಗಿ ಬೆಳವಣಿಗೆಯಾಗಿದೆ. ಕಾರಣಕರ್ತರಾದ ತಮ್ಮೆಲ್ಲರಿಗೂ ಪ್ರಕಾಶಾ ಮೋಟರ್ಸ್ ಚಿರಋಣಿ.

ಪ್ರಕಾಶಾ ಮೋಟಾರ್ಸ್‌ನಲ್ಲಿ ಯಾವುದೇ ಹಿರೋ ವಾಹನ ಖರೀದಿಸಿದವರಿಗೆ ಪ್ರಕಾಶಾ ಮೋಟಾರ್ಸ್‌ನ 18ನೇ ವಾರ್ಷಿಕೋತ್ಸವದ ಸವಿನೆನಪಿಗಾಗಿ ವಿಶೇಷ ಕೊಡುಗೆ ನೀಡಲಾಗುವದು.
(ಕೊಡುಗೆ ಫೆಬ್ರವರಿ 28ರವರೆಗೆ ಮಾತ್ರ)



ಹೀರೋ ಹಾಗೂ ಪ್ರಕಾಶಾ ಮೋಟರ್ಸ್ ಗ್ರಾಹಕರ ನಂಬಿಗೆಯ ಪ್ರತೀಕವಾಗಿವೆ.

ಹೀರೋ ಮೋಟೋಕಾರ್ಪ್ ಅಧಿಕೃತ ಡೀಲರ್ಸ್

ಪ್ರಕಾಶಾ ಮೋಟರ್ಸ್

(ಅಂಬರ್‌ಕರ್ ಸಮೂಹ ಸಂಸ್ಥೆ)

ನಂ.1945/41, ಉಮಾಪತಿ ಆರ್ಕೇಡ್, ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಹತ್ತಿರ, ಹರಿಹರ ರಸ್ತೆ, ದಾವಣಗೆರೆ-06. ಫೋ: 272134/35, ಮೊ.: 9449865565, 9513353836

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ವಾಜಪೇಯಿ ಲೇಔಟ್ 120 ಅಡಿ ರಿಂಗ್ ರೋಡ್, 35x59 ಕಾರ್ನರ್ ಉತ್ತರ-ಪಶ್ಚಿಮ 30x35 ಪಶ್ಚಿಮ, ಬಸವೇಶ್ವರ ಲೇಔಟ್, 55x60 ದಕ್ಷಿಣ ಹೆಚ್.ಕೆ.ಆರ್. ಸರ್ಕಲ್ ಹತ್ತಿರ, 13x30 ಕೆಳಗೆ ಮಳಿಗೆ ಮೇಲೆ ಸಿಂಗಲ್ ಬೆಡ್ ರೂಂ ಮನೆ (1st ಫ್ಲೋರ್)
ಸುರೇಶ್ 95911 60520

**ಸೈಟುಗಳು ಮಾರಾಟಕ್ಕೆ (ಡಬಲ್ ರೋಡ್‌ಗೆ)**
ಕರ್ನಾಟಕ ಗೃಹ ಮಂಡಳಿಯಲ್ಲಿ 55x78 ಉತ್ತರ ಪೂರ್ವ ಕಾರ್ನರ್ 30x50 ಪೂರ್ವ, 40x60 ಉತ್ತರ. 60x80 ಪೂರ್ವ, 55x80 ವೆಸ್ಟ್ ಸೌತ್, 55x45 ವೆಸ್ಟ್ ಸೌತ್ ಕಾರ್ನರ್ ಡಬಲ್ ರೋಡ್‌ಗೆ
ಕಿರಣ್ ಬೂಸ್ನೂರ್ : 98440 63409
ಈ ಸೈಟುಗಳನ್ನು ನಾವು ಕೇವಲ (0.5) ಅರ್ಧ ಪರ್ಸೆಂಟ್ ಕಮೀಷನ್‌ಗೆ ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ಕೊಡಿಸುತ್ತೇವೆ.

**ಬೇಕರಿ ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ಸುಸ್ಥಿತಿಯಲ್ಲಿರುವ ಬೇಕರಿ ಬಾಡಿಗೆಗೆ ಇದೆ.
ಸಂಪರ್ಕಿಸಿ :
94811-73374

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು ಮತ್ತು ಭಟ್ಟರು ಬೇಕಾಗಿದ್ದಾರೆ. ಅನುಭವ ಉಳ್ಳವರಿಗೆ ಮಾತ್ರ 25,000 ಸಾವಿರ ಸಂಬಳ ಕೊಡಲಾಗುತ್ತದೆ.
97435 36352

**ಸೈಟು ಮಾರಾಟಕ್ಕೆ (JHP)**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
20x30 ಪೂರ್ವ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ಉತ್ತರ, 40x70 ದಕ್ಷಿಣ, 40 ಅಡಿ ರಸ್ತೆಗೆ ಕುವೆಂಪು ಬಡಾವಣೆಯಲ್ಲಿ 24x60 ದಕ್ಷಿಣ, ಶಿವಕುಮಾರ ಸ್ವಾಮಿ ಬಡಾವಣೆ 20x60 ಪೂರ್ವ
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್, ಬಸವೇಶ್ವರ ಲೇಔಟ್, ಸಿದ್ದವೀರಪ್ಪ ಬಡಾವಣೆ, ವಿದ್ಯಾನಗರ.
ಮೊ. 97425-12125

**ಬಾಡಿಗೆಗೆ**
3000 ಚ. ಅಡಿ ಮೊದಲನೇ ಮಹಡಿ, ಪಿ.ಜೆ. ಬಡಾವಣೆ, ಕಮರ್ಷಿಯಲ್ 22x55ರ 2 ಗೋಡೌನ್‌ಗಳು, ಬಸಾಪುರ ರಸ್ತೆ ಹತ್ತಿರ ಬಾಡಿಗೆ ಇವೆ.
94480 28103

**NAVODAYA, MORARJI COACHING**
BATCH STARTS FROM 21.02.2022
Samruddi Academy
63646 40296

**FOR RENT**
Ground Floor for Commercial
P.J. Extension, 3rd Main, Beside Pooja Children Hospital,
94483 19083, 91106 64995

**ಮನೆ ಬಾಡಿಗೆ/ಲೀಸ್‌ಗೆ**
ನಿಟುವಳ್ಳಿ ಹೊಸ ಬಡಾವಣೆ ಬನಶಂಕರಿ ದೇವಸ್ಥಾನದ ರಸ್ತೆ ಹತ್ತಿರ ಡಬಲ್ ಬೆಡ್‌ರೂಂ, ಉತ್ತರ ದಿಕ್ಕಿನ ಮೊದಲನೆ ಮಹಡಿ, ಪಾರ್ಕಿಂಗ್, ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗೆ /ಲೀಸ್‌ಗೆ ಇದೆ.
97435 59986

**ಸೈಟು ಬೇಕಾಗಿದೆ**
ಎಂ.ಬಿ. ಸಿಟಿಯಲ್ಲಿ 30x40 ಅಥವಾ 30x50 ಅಳತೆಯ ಸೈಟು ಬೇಕಾಗಿದೆ.
63610 59489

GST Registration, INCOME TAX, CASES, Audit and for Accounts Maintenances
Contact
MEGHANA ASSOCIATES (R)
99809 16126

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಪ್ರಕಟಣೆ**
ಶ್ರೀ ವೀರಭದ್ರೇಶ್ವರ ಫೈನಾನ್ಸ್,
ನಂ. 105/83/105, ಚರ್ಚ್ ರಸ್ತೆ, ಆರ್.ಕೆ. ಸಾಮಿಲ್, ಹರಿಹರ
ಈ ಮೇಲ್ಕಂಡ ಫೈನಾನ್ಸ್ ವ್ಯವಹಾರವನ್ನು ದಿ. 31.03.2021ಕ್ಕೆ ಮುಕ್ತಾಯ ಮಾಡಲಾಗಿದೆ. ಯಾವುದೇ ಬಾಕಿ ವ್ಯವಹಾರಗಳು ಇದ್ದಲ್ಲಿ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ :
ಬಿ.ಕೆ. ಸುರೇಂದ್ರ ಕುಮಾರ್,
ಮಾಲೀಕರು, ಶ್ರೀ ವೀರಭದ್ರೇಶ್ವರ ಫೈನಾನ್ಸ್,
97415 57425

ಡಾಲರ್ಸ್ ಕಾಲೋನಿಯಲ್ಲಿ, ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ.
70x65 Corner, 30x50 South, 30x50, 30x50 West ಅಕ್ಕಪಕ್ಕ. 30x50, 30x50 South ಅಕ್ಕಪಕ್ಕ. 30x40 West 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ಫಾರ್ಮಾದಲ್ಲಿ ಕೆಲಸ ಮಾಡಲು PUC or ಡಿಗ್ರಿ ಆದ ಸೀನಿಯರ್ ಪರ್ಸನ್ಸ್ ಬೇಕಾಗಿದ್ದಾರೆ. ದಾವಣಗೆರೆ.
ಸಂಪರ್ಕಿಸಿ : 94483 19083
91106 64995

**G-Shop**
Sales representative
Qualification - PUC or Any degree
Salary : 10,000=00
Contact No.
Nidhi - 9620086824 ,
Akshata - 9071291672
Residential should be Davanagere and Harihar City

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
63636 44757
96320 99991

**ಮನೆಗಳು ಬಾಡಿಗೆಗೆ ಇದೆ**
ಬೆಳ್ಳೂಡಿ ಗಲ್ಲಿಯ ಪಾರಸ್ ಕ್ಲಾತ್ ಸೆಂಟರ್ ಇರುವ ಬಿಲ್ಡಿಂಗ್‌ನಲ್ಲಿ ಸೆಕೆಂಡ್ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂನ ಮನೆ ಮತ್ತು ಗ್ರೌಂಡ್ ಫ್ಲೋರ್ ನಲ್ಲಿ ಡಬಲ್ ಬೆಡ್ ರೂಂನ ಮನೆ ಬಾಡಿಗೆಗೆ ಇವೆ.
99865 44132

**WANTED**
Required Executive for Jio Company Field Work. Minimum Qualification : PUC, Smart Phone 4G. Two Wheeler must. Salary Rs. 15,000/-. Address : Jio Connect, MCC 'B' Block, Near Reddy Building, DVG.
99028 38080, 93533 90268

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ /ಹುಡುಗಿಯರು ಬೇಕಾಗಿದ್ದಾರೆ.
ಐ.ಡಿ. ವೀರಣ್ಣ ಪೆಟ್ರೋಲ್ ಬಂಕ್, ದೊಡ್ಡಬಾತಿ
70906 49340
98443 83522

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮನೆ ಬಾಡಿಗೆಗೆ ಇದೆ**
ದೇವರಾಜ ಅರಸ್ ಬಡಾವಣೆ 'ಎ' ಬ್ಲಾಕ್, 3ನೇ ಕ್ರಾಸ್ ಕೋರ್ಟ್ ಹಿಂಭಾಗ, ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
99459 99381
74111 56285

**HOUSE FOR RENT / LEASE**
A Modern spacious 2BHK House in 1st floor with car parking facility Opp to Davan's College, MCC 'B' Block, Davanagere
86183 97950
96636 95275

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲ ಪರಿಶೋಧಕರು
94492 02888

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**WANTED**
Banking Sector tele caller(Female Only)
Qualification - Any Degree
No.2257/5 2nd Floor, M.C.C 'A' Black BesideTogataveera Kalyana Manatapa
9663072555
Interview time : 11 AM

**ಮನೆ ಬಾಡಿಗೆಗೆ ಇದೆ**
2BHK ಮೊದಲನೆ ಮಹಡಿ, ಬೋರ್‌ವೆಲ್ ವ್ಯವಸ್ಥೆ ಹಾಗೂ ಕಾರ್ಪೊರೇಶನ್ ನೀರಿನ ವ್ಯವಸ್ಥೆಯಿರುತ್ತದೆ. ಶಿವಕುಮಾರ್ ಸ್ವಾಮಿ ಬಡಾವಣೆ ಮೊದಲನೆ ಹಂತ, 6 ನೇ ಮೇನ್ 2 ನೇ ಕ್ರಾಸ್ ದಾವಣಗೆರೆ.
73493 72914 , 74062 93090

**ಸಂಘ-ಸಂಸ್ಥೆಗಳ ಬೈಲಾ ನೋಂದಣಿ, ನವೀಕರಣ, ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ**
MEGHANA ASSOCIATES (R)
99809 16126

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಹೆಸರು ಬದಲಾವಣೆ**
KRISHNA KUMAR GOWDA, ಆದ ನಾನು ತಿಳಿಸುವುದೇನೆಂದರೆ ನನ್ನ ಮಗನ ಜನನ ಪ್ರಮಾಣ ಪತ್ರದಲ್ಲಿ MALLIKARJUNA SUSHMA GOWDA ಎನ್ನುವುದರ ಬದಲಾಗಿ Manomay Sushma Gowda ಎಂದು ತಪ್ಪಾಗಿ ನಮೂದಾಗಿರುತ್ತದೆ. ದಿ.:8.2.22 ರಂದು ನೋಟರಿಯವರ ಮುಂದೆ ನನ್ನ ಮಗನ ಹೆಸರನ್ನು MALLIKARJUNA SUSHMA GOWDA ಎಂದು ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಮಗನ ಎಲ್ಲಾ ದಾಖಲಾತಿಗಳಲ್ಲೂ MALLIKARJUNA SUSHMA GOWDA ಎಂದು ಇರುತ್ತದೆ.

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಮನೆ ಬಾಡಿಗೆಗೆ**
ಜಯನಗರದಲ್ಲಿ 15x40 ವಿಸ್ತೀರ್ಣದ ಮೊದಲ ಮಹಡಿ ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ಹಾಗೂ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
94484 39639

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಓಂ ಶ್ರೀ ಕೇರಳ ಭದ್ರಕಾಳಿ ಜ್ಯೋತಿಷ್ಯರು**
ಪಂಡಿತ್ ಶಕ್ತಿಪ್ರಸಾದ್
ನುಡಿದಂತೆ ನಡೆಯುವುದು.ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ, ಆರೋಗ್ಯ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಇಂದೇ ಕರೆ ಮಾಡಿ ಪರಿಹರಿಸಿಕೊಳ್ಳಿ.
100% ಪರಿಹಾರ ಶತಸಿದ್ಧ.
99807 70791

**SBI Life Insurance**
ಕಂಪನಿಯು ಇನ್ಶೂರೆನ್ಸ್ ಪ್ರತಿನಿಧಿಗಳ ಕೆಲಸಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದೆ.
ವಿದ್ಯಾರ್ಹತೆ: SSLC ಉತ್ತೀರ್ಣ, ವಯಸ್ಸು: 18 ವರ್ಷ ತುಂಬಿರ ಬೇಕು. ಸೌಲಭ್ಯ: ಆಕರ್ಷಕ ಕಮೀಷನ್, ವೇತನ, ವಿದೇಶ ಪ್ರವಾಸ, ಮಾಸಿಕ 10 ಸಾವಿರ ರೂ ಪೆನ್ಷನ್
ಸಂಪರ್ಕಿಸಿ: Ravikumar M.G.
Agency Manager, SBI Life Insurence, DVG Branch
95358 10209

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
**ಕಛೇರಿಗಾಗಿ ಬಾಡಿಗೆ ಕಟ್ಟಡ ಬೇಕಾಗಿದೆ**
ದಾವಣಗೆರೆ ಬೆವಿಕಂ ದಾವಣಗೆರೆ, ಬೆವಿಕಂ ನಗರ ಉಪವಿಭಾಗ-1ರ ಕಛೇರಿಯ ಹೆಚ್ಚುವರಿ ನಗದು ಶಾಖೆಯ ಬಳಕೆಗಾಗಿ ದಾವಣಗೆರೆ ನಗರದ ನಿಟುವಳ್ಳಿ ಬಡಾವಣೆ ಸುತ್ತಮುತ್ತ ಸುಮಾರು 300 ಚದರ ಅಡಿ ಅಳತೆಯ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ನೀಡಲು ಈ ಕೆಳ ಸಹಿದಾರರ ಕಚೇರಿಗೆ ಸಂಪರ್ಕಿಸುವುದು ಅಥವಾ ದೂರವಾಣಿ ಸಂಖ್ಯೆ 97391 50379ಗೆ ಕರೆ ಮಾಡಲು ತಿಳಿಸಲಾಗಿದೆ.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾ ಮತ್ತು ಪಾ ವಿಭಾಗ, ಬೆವಿಕಂ, ದಾವಣಗೆರೆ

**WANTED**
Commercial Space of 10000 sft area with in the city limits required.
Please contact :
9880739392

**REQUIRED**
LADIES WARDEN
EXPERIENCE:- 1Yr
LOCATION: DAVANGERE
CONTACT:
8296376716

**ತುರ್ತಾಗಿ ಬೇಕಾಗಿದ್ದಾರೆ**
ಪರ್ವ ಮಿಲೆಟ್ ಹೆಲ್ತ್ ಮಿಕ್ಸ್ ಸೆಂಟರ್ ಎಂಬ ಕಂಪನಿಗೆ ದಾವಣಗೆರೆ ಹಾಗೂ ಹಾವೇರಿ ಜಿಲ್ಲೆ, ಸಿಟಿ, ತಾಲ್ಲೂಕಿನಾದ್ಯಂತ ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ.
84314 81240

**PRINCE CORRESPONDENCE COLLEGE**
* ನೇರವಾಗಿ ದ್ವಿತೀಯ ಪಿಯುಸಿಗೆ ಪ್ರವೇಶ ಪಡೆಯಬಹುದು (NIOS)
* Arts, Commerce, Science
* B.A., B.Com., B.Sc., BBM.,
* M.A., M.Com., M.Sc., (all sub)
* Diploma, B.E. MBA., MCA.,
& All Courses
77609 55550, 96200 28627

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
**ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ,**
ರೂಸಾ ಅನುದಾನಿತ UGC Recognised Under 2(f) & 12(B) ನ್ಯಾಕ್ 'ಬಿ' ಗ್ರೇಡ್
Phone : 08192-237106, E-mail: gfgcwomendavanagere@gmail.com
Website: gfgc.kar.nic.in/davanagere-women
ಸಂಖ್ಯೆ: ಸಪ್ರದಮಕಾದಾ/ವಿಪ್ರಉಕ/ಟೆಂಡರ್/2021–22 ದಿನಾಂಕ:11–02–2022
**ಟೆಂಡರ್ ಪ್ರಕಟಣೆ**
2021–22ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ–04 ಇಲ್ಲಿಗೆ ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಇವರಿಂದ ಅಗತ್ಯ ಪ್ರಯೋಗಾಲಯ ಉಪಕರಣಗಳು ಖರೀದಿಗಾಗಿ ಅನುದಾನ ಬಿಡುಗಡೆಯಾಗಿದೆ.
ಇದು ಅನುದಾನದಲ್ಲಿ ಕಾಲೇಜಿನ ಪ್ರಯೋಗಾಲಯಕ್ಕೆ ಅಗತ್ಯ ಪ್ರಯೋಗಾಲಯ ಉಪಕರಣ ಸರಬರಾಜು ಮಾಡಲು ಅರ್ಹ ಅಧಿಕೃತ ಮಾರಾಟಗಾರರು/ತಯಾರಕರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸರಬರಾಜುದಾರರು ಕೆಳಕಂಡಂತೆ ಅರ್ಜಿ ಮತ್ತು EMD ಮೊತ್ತದೊಂದಿಗೆ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ದಾವಣಗೆರೆ ಇವರ ಹೆಸರಿಗೆ ಡಿ.ಡಿ ಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.
1) **ಸರಬರಾಜು ವಿವರ:** ಪ್ರಯೋಗಾಲಯ ಉಪಕರಣಗಳು, **ಅಂದಾಜು ಮೊತ್ತ** ರೂ. 2.00,000/–, **ಠೇವಣಿ ಮೊತ್ತ** ರೂ. 10,000/–, **ಟೆಂಡರ್ ಅರ್ಜಿ ಬೆಲೆ** ರೂ. 500/–
ಟೆಂಡರ್ ಅರ್ಜಿಗಳನ್ನು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆಯ ಕಛೇರಿಯಲ್ಲಿ ದಿನಾಂಕ:11–02–2022 ರಿಂದ 12–03–2022 ರ ಮಧ್ಯಾಹ್ನ 12.00 ವರೆಗೆ ಪಡೆಯಬಹುದು.
1) ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕಡೆ ದಿನಾಂಕ: 12–03–2022 ಮಧ್ಯಾಹ್ನ 1.00 ಗಂಟೆಗೆ, 2) ಟೆಂಡರ್ ತೆರೆಯುವ ದಿನಾಂಕ: 12–03–2022 ರ ಮಧ್ಯಾಹ್ನ 3–00 ಗಂಟೆಗೆ. 3) ಟೆಂಡರ್ ತರಯುವ ಸ್ಥಳ: ಪ್ರಾಂಶುಪಾಲರ ಕಾರ್ಯಾಲಯ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ–04.
ಹೆಚ್ಚಿನ ಮಾಹಿತಿಯನ್ನು ಶಾಲೇಜಿನ ಕಛೇರಿಯಲ್ಲಿ ಪಡೆಯಬಹುದು.
ವಾಸಾಸಂಇ/ದಾವಣಗೆರೆ/ಎಸ್ಎಸ್‌ಸಿ/743/2021–22
ಸಹಿ/– ಪ್ರಿನ್ಸಿಪಾಲರು,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ–04.

**ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.**
ಸಹಾಯಕ ಬೀಜೋತ್ಪಾದನಾ ತಜ್ಞರು, ಬೀಜ ಘಟಕ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ, ಚನ್ನಗಿರಿ (ತಾ||) ದಾವಣಗೆರೆ (ಜಿ)
ಸಂಖ್ಯೆ :ಕೃ.ತೋ.ಸಂ. ಕೇಂದ್ರ/ಬೀಜಘಟಕ/2021-22 ದಿನಾಂಕ : 12.2.2022
**ಟೆಂಡರ್ / ಬಹಿರಂಗ ಹರಾಜು ಪ್ರಕಟಣೆ**
ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ ಬೀಜಘಟಕ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆಯ ಉಗ್ರಾಣದಲ್ಲಿ ಇರುವ ವಿವಿಧ ಬೆಳೆ/ತಳಿಯ ದಾಸ್ತಾನಿಕನ ವಿವರ ಈ ಕೆಳಕಂಡಂತೆ ಇರುತ್ತದೆ.
01) ಬೆಳೆ-ತಳಿ : ರಾಗಿ / ಜಿ.ಪಿ.ಯು-28 - ಪ್ರಮಾಣ: (ಕ್ವಿ) 298.30
02) ಬೆಳೆ-ತಳಿ : ರಾಗಿ / ಎಂ.ಎಲ್-365 - ಪ್ರಮಾಣ: (ಕ್ವಿ) 239.50
ಈ ಮೇಲ್ಕಂಡ ಬೆಳೆ-ತಳಿಯ ದಾಸ್ತಾನನ್ನು ವಿಶ್ವವಿದ್ಯಾಲಯದ ಷರತ್ತುಗಳ ಅನ್ವಯದ ಮೇರೆಗೆ ದಿನಾಂಕ : 21.02.2022 ರಂದು ಬೀಜಘಟಕ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆಯಲ್ಲಿ ಬೆಳಗ್ಗೆ 11.30 ಗಂಟೆಗೆ ಧಾನ್ಯ ಈಗಿರುವ ಹಾಗೆಯೇ ಬಹಿರಂಗ ಹರಾಜು/ಟೆಂಡರ್ ಮುಖಾಂತರ ವಿಲೇವಾರಿ ಮಾಡಲಾಗುವುದು. ಆಸಕ್ತಿವುಳ್ಳ ಬಿಡ್ಡುದಾರರು / ಖರೀದಿದಾರರು ಭಾಗವಹಿಸಬೇಕೆಂದು ತಿಳಿಯಪಡಿಸಲಾಗಿದೆ.
ಪ್ರತಿ ಬಿಡ್ಡುದಾರರು ಠೇವಣಿ ಮೊತ್ತ ರೂ. 50,000/- ಗಳ ನಗದು ಹಣವನ್ನು ಬಹಿರಂಗ ಹರಾಜು/ಟೆಂಡರ್ ಆರಂಭಿಸುವ ಮೊದಲಿಗೆ ಪಾವತಿಸಬೇಕು.
ಸಹಿ/- ಸಹಾಯಕ ಬೀಜೋತ್ಪಾದನಾ ತಜ್ಞರು, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ-577 219 ಚನ್ನಗಿರಿ (ತಾ.)
ಮೊ. : 9483695477, 9480838213


# ಇಬ್ರಾಹಿಂ ಸುತಾರರಿಗೆ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಲು ಆಗ್ರಹ



## ಹರಿಹರ ಕಸಾಪದಿಂದ ಲತಾ ಮಂಗೇಶ್ಕರ್, ಇಬ್ರಾಹಿಂ ಸುತಾರರಿಗೆ ನುಡಿ ನಮನ

ಹರಿಹರ,ಫೆ.15- ಕೋಟ್ಯಾಂತರ ಭಾರತೀಯರ ಮನಸ್ಸಿನಲ್ಲಿ ರಾಷ್ಟ್ರಭಕ್ತಿಯ ಕಿಚ್ಚು ಮೂಡಿಸಿದ, ಸಂಗೀತ ಪ್ರಿಯರ ಕಣ್ಣಲ್ಲಿ ನೀರು ತರಿಸಿದ ಗಾಯಕಿ ಲತಾ ಮಂಗೇಶ್ಕರ್ ಅವರ ಅಗಲಿಕೆ ಭಾರತೀಯ ಸಂಗೀತ ಲೋಕಕ್ಕೆ ತುಂಬಲಾಗದ ನಷ್ಟ ಎಂದು ಸಾಹಿತಿ ಪ್ರೊ. ಹೆಚ್.ಎ.ಭಿಕ್ಷಾವರ್ತಿಮಠ ನುಡಿದರು.

ನಗರದ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರೌಢಶಾಲೆಯಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಲತಾ ಮಂಗೇಶ್ಕರ್ ಮತ್ತು ಇಬ್ರಾಹಿಂ ಸುತಾರ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಎಲ್ಲಾ ಭಾಷೆಗಳಲ್ಲಿ ಹಾಡಿರುವ ಲತಾ ಅವರ ಇಂಪಾದ ಧ್ವನಿ ಮತ್ತು ಮಧುರವಾದ ಗಾಯನವೇ ಅವರ ಜನಪ್ರಿಯತೆಗೆ ಕಾರಣವಾಗಿತ್ತು. ವಿಶ್ವದಲ್ಲಿ ಅವರು ತಮ್ಮದೇ ಛಾಪು ಮೂಡಿಸಿ ಹೋಗಿದ್ದಾರೆ. ಅವರ ಹಾಡಿನ ಧ್ವನಿ ಕೇಳುವುದರ ಮೂಲಕ ನಾವು ಅವರನ್ನು ಸ್ಮರಿಸಿಕೊಂಡು, ನಮ್ಮ ಮುಂದಿನ ಜೀವನ ನಡೆಸಬೇಕಿದೆ ಎಂದರು.

ಇನ್ನು ಕರ್ನಾಟಕದ ಕಬೀರ ಇಬ್ರಾಹಿಂ ಸುತಾರ್ ಅವರ ನಿಧನ ನಮಗೆಲ್ಲಾ ಆಘಾತ ತಂದಿದೆ. ಅವರಲ್ಲಿದ್ದ ಸರಳ, ಸಜ್ಜನಿಕೆ ಗುಣಗಳಿಂದ ಇಡೀ ಕರ್ನಾಟಕದ ಜನತೆಯ ಮನವನ್ನು ಗೆದ್ದಿದ್ದಾರೆ. ಅವರು ಅಪರೂಪದ ವ್ಯಕ್ತಿಯಾಗಿದ್ದರು. ಎಲ್ಲಾಧರ್ಮಗಳ ಸಾರವನ್ನು ಅರ್ಥಮಾಡಿಕೊಂಡು ಮಾನವ ಧರ್ಮದ ಬಗ್ಗೆ ಪ್ರವಚನ ನೀಡಿ, ಜನರಲ್ಲಿ ಸಜ್ಜನಿಕೆ ಹೆಚ್ಚಾಗುವಂತೆ ಮಾಡುತ್ತಿದ್ದರು.

ಇಂತಹ ಮಾನವ ಧರ್ಮದ ಹರಿಕಾರ ಇಬ್ರಾಹಿಂ ಸುತಾರರಿಗೆ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವಂತೆ ಪ್ರೊ.ಭಿಕ್ಷಾವರ್ತಿಮಠ ಆಗ್ರಹಿಸಿದರು.

ಸಾಹಿತಿ ಜೆ. ಕಲೀಂಭಾಷ ಮಾತನಾಡಿ, ಲತಾ ಮಂಗೇಶ್ಕರ್ ಮತ್ತು ಇಬ್ರಾಹಿಂ ಸುತಾರ್ ಇಬ್ಬರೂ ಮತ್ತೆ ಹುಟ್ಟಿಬರಲೆಂದು ಪ್ರಾರ್ಥಿಸಿದರು.

ಕಾರ್ಮಿಕ ಮುಖಂಡ ಹೆಚ್.ಕೆ.ಕೊಟ್ರಪ್ಪ, ಬಂಡಾಯ ಸಾಹಿತಿ ಹುಲಿಕಟ್ಟೆ ಚನ್ನಬಸಪ್ಪ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಕ್ರೀಡಾಪಟು ಹೆಚ್. ನಿಜಗುಣ ನುಡಿ ನಮನ ಸಲ್ಲಿಸಿದರು.

ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಅಧ್ಯಕ್ಷತೆ ವಹಿಸಿದ್ದರು. ಪರಸ್ಪರ ಬಳಗದ ಸಂಚಾಲಕ ಎ.ರಿಯಾಜ್ ಅಹ್ಮದ್, ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಎ.ಕೆ.ಭೂಮೇಶ್, ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಎಂ.ಉಮ್ಮಣ್ಣ, ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ.ಕೊಟ್ರೇಶಪ್ಪ, ತಾಲ್ಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಡಿ.ಟಿ. ತಿಪ್ಪಣ್ಣರಾಜು, ಕಾರ್ಯದರ್ಶಿ ಈಶಪ್ಪ ಬೂದಿಹಾಳ್, ಹಿರಿಯ ಪತ್ರಕರ್ತ ಸುಬ್ರಹ್ಮಣ್ಯ ನಾಡಿಗೇರ್ ಉಪಸ್ಥಿತರಿದ್ದರು.

ಕಸಾಪ ಗೌರವ ಕಾರ್ಯದರ್ಶಿ ಬಿ.ಬಿ. ರೇವಣನಾಯ್ಕ್ ಸ್ವಾಗತಿಸಿದರು. ಎಂ.ಎನ್. ಶ್ರೀಧರ ಮಯ್ಯ ವಂದಿಸಿದರು.

## ರಾ..ರಾ.. ಎಂದಾಗ ಬಂದಳು

**(1ನೇ ಪುಟದಿಂದ)** ಸಭೆಗೆ ತಿಳಿಸಿ ಸಂಭ್ರಮಿಸಿದರು. ತಮ್ಮ ಆಶೀರ್ವಚನದಲ್ಲಿ ಈ ಬಗ್ಗೆ ಮಾತನಾಡಿದ ಸಿರಿಗೆರೆ ಶ್ರೀಗಳು, ನೀರಾವರಿ ವಿಷಯದಲ್ಲಿ ತಾವು 'ಕೆಟಲಿಸ್ಟ್' (ವೇಗವರ್ಧಕ) ಆಗಿ ಕೆಲಸ ಮಾಡಿದ್ದೇವಷ್ಟೇ. ಈ ಯೋಜನೆಗಳ ಹಿಂದೆ ಹಿಂದಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಹೆಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಎಲ್ಲರೂ ಕೆಲಸ ಮಾಡಿದ್ದಾರೆ ಎಂದರು.

ಈ ಹಿಂದೆ 2018ರಲ್ಲಿ ಜಗಳೂರಿನಲ್ಲಿ ತರಳಬಾಳು ಹುಣ್ಣಿಮೆ ಮಹೋತ್ಸವ ನಡೆದಾಗ ಎಸ್.ವಿ. ರಾಮಚಂದ್ರ ಅವರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಅವರು ಗೌರವಾಧ್ಯಕ್ಷರಾಗಿದ್ದರು. ಇವರಿಬ್ಬರ ಹೆಸರಿನ ಮೊದಲ ಅಕ್ಷರ 'ರಾ' ಎಂಬುದೇ ಆಗಿದೆ. ಹೀಗಾಗಿ ಇವರಿಬ್ಬರ ಹೆಸರಿನ ಮೊದಲ ಅಕ್ಷರಗಳನ್ನು ಜೊತೆಯಾಗಿ ಕರೆದರೆ 'ರಾರಾ' ಆಗುತ್ತದೆ. ತೆಲುಗಿನಲ್ಲಿ ರಾರಾ ಎಂದರೆ ಕರೆಯುವುದು ಎಂಬರ್ಥ ಬರುತ್ತದೆ. ಹೀಗಾಗಿ ಇವರಿಬ್ಬರು 'ರಾ.. ರಾ..' ಎಂದು ಕರೆದಾಗ ತುಂಗಭದ್ರೆಯೇ ಹರಿದು ಬಂದಿದ್ದಾಳೆ ಎಂದರು.

ಇದಕ್ಕೂ ಮುಂಚೆ ಮಾತನಾಡಿದ್ದ ಪರಿಷತ್ ಸದಸ್ಯ ಎನ್. ರವಿಕುಮಾರ್ , ಸಿರಿಗೆರೆ ಶ್ರೀಗಳು ಕೃಷಿ, ಶಿಕ್ಷಣ ಸೇರಿದಂತೆ ಹಲವು ವಿಷಯಗಳಲ್ಲಿ ಮಾರ್ಗದರ್ಶನ ಮಾಡಬಲ್ಲರು. ಅವರು ಬಹುಭಾಷಾ ಪರಿಣಿತರು. ನಾಡನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುವ ಕೆಲಸವನ್ನು ಸ್ವಾಮೀಜಿ ಮಾಡುತ್ತಿದ್ದಾರೆ ಎಂದು ಹೇಳಿದರು.

ಚಿತ್ರದುರ್ಗ ಶಾಸಕ ಜಿ.ಹೆಚ್.ತಿಪ್ಪಾರೆಡ್ಡಿ ಮಾತನಾಡಿ, ಹಿರಿಯ ಸ್ವಾಮೀಜಿಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರು ಹಳ್ಳಿಗಾಡಿನ ಪ್ರದೇಶಗಳಿಗೆ ಅಕ್ಷರ ಹಾಗೂ ಅನ್ನ ದಾಸೋಹ ಕೊಟ್ಟಿದ್ದರು. ಈಗ ಸಿರಿಗೆರೆ ಶ್ರೀಗಳು ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿ ರೈತರಿಗೆ ಆಶಾಕಿರಣವಾಗಿದ್ದಾರೆ ಎಂದರು.

ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಮಾತನಾಡಿ, ಈ ಹಿಂದೆ ಮಲ್ಲಿಕಾರ್ಜುನ ಸ್ವಾಮಿಗಳು ಎತ್ತಿನ ಬಂಡಿಯಲ್ಲಿ ಬಂದು ಮನೆಗೆ 2 ರೂ. ಕೇಳುತ್ತಿದ್ದರು. ಈಗ ಮಠ 650 ಕೋಟಿ ರೂ. ಆಸ್ತಿ ಹೊಂದಿದೆ. ಅನೇಕ ಕಡೆಗಳಲ್ಲಿ ಆಸ್ತಿ ಇದೆ ಎಂದು ಹೇಳಿದರು.

ಉಬ್ರಾಣಿ ಅಮೃತಾಪುರ ಏತ ನೀರಾವರಿ ಯೋಜನೆಗೆ ಇಷ್ಟೊಂದು ಹಣ ಬೇಕೆ ಎಂದು ರಾಜ್ಯ ಸರ್ಕಾರ ಪ್ರಶ್ನಿಸಿತ್ತು. ಆದರೆ, ಯೋಜನೆ ಯಶಸ್ವಿಯಾಗಿದ್ದಲ್ಲದೇ, ರಾಜ್ಯಾದ್ಯಂತ ಏತ ನೀರಾವರಿ ಯೋಜನೆ ಜಾರಿಗೆ ಬರಲು ಸ್ಫೂರ್ತಿಯಾಯಿತು. ಸಿರಿಗೆರೆ ಶ್ರೀಗಳ ಆಲೋಚನೆ ಪರಿಣಾಮ ರಾಜ್ಯ ಸುಭೀಕ್ಷವಾಯಿತು ಎಂದರು.

ಕಡೂರು ಶಾಸಕ ಬೆಳ್ಳಿ ಪ್ರಕಾಶ್ ಮಾತನಾಡಿ, ಗುರುಗಳ ಸಾನ್ನಿಧ್ಯದಲ್ಲಿ ನಡೆದ ಚರ್ಚೆಯ ಪರಿಣಾಮವಾಗಿ ಆಗ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪನವರು ತರೀಕೆರೆ - ಚಿಕ್ಕಮಗಳೂರು ಭಾಗಕ್ಕೆ 1,281 ಕೋಟಿ ರೂ.ಗಳ ನೀರಾವರಿ ಯೋಜನೆ ಮಂಜೂರು ಮಾಡಿದರು ಎಂದು ಹೇಳಿದರು.

## ಭಾವುಕರಾದ ಶಾಸಕ ರಾಮಚಂದ್ರ

**(1ನೇ ಪುಟದಿಂದ)** ಜಗಳೂರಿನಲ್ಲಿ ಕುಡಿಯಲು ನೀರಿಲ್ಲ ಎಂದು ಜನ ಹೆಣ್ಣು ಕೊಡಲು ಹಿಂದೆ ಮುಂದೆ ನೋಡುತ್ತಿದ್ದರು. ಈಗ ಕೆರೆಗಳಿಗೆ ನೀರು ಬಂದಿರುವುದರಿಂದ ಅಂತರ್ಜಲ ಹೆಚ್ಚಾಗುತ್ತಿದೆ. ಮುಂದಿನ ದಿನಗಳಲ್ಲಿ ತೋಟಗಾರಿಕೆ ಬೆಳೆಗಳು ಸಾಧ್ಯವಾಗಿ ನಮ್ಮ ರೈತರೂ ಆರ್ಥಿಕವಾಗಿ ಮುಂದೆ ಬರಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

## 23 ವಿದ್ಯಾರ್ಥಿನಿಯರು ಗೈರು

**(1ನೇ ಪುಟದಿಂದ)** ಸಿದ್ಧತೆ ಪರೀಕ್ಷೆ ನಡೆಸಲಾಗಿದೆ. ಅದರಲ್ಲಿ ಹರಿಹರ ನಗರದ ಧ.ರಾ.ಮ. ಸರ್ಕಾರಿ ಪ್ರೌಢಶಾಲೆಯಲ್ಲಿ ಮಾತ್ರ ಎಸ್.ಎಸ್.ಎಲ್.ಸಿ.ಯ 23 ವಿದ್ಯಾರ್ಥಿಗಳು ಮತ್ತು 8 ನೇ ತರಗತಿ ಮೂವರು ವಿದ್ಯಾರ್ಥಿಗಳು ಹಿಜಾಬ್ ಧರಿಸಿ ಆಗಮಿಸಿದ್ದರಿಂದ ಅವರಿಗೆ ಮನೆಗಳಿಗೆ ವಾಪಸ್ ಕಳಿಸಲಾಯಿತು. ಉಳಿದಂತೆ ಎಲ್ಲಾ ಶಾಲೆಗಳಲ್ಲಿ ಮಕ್ಕಳು ಯಾವುದೇ ರೀತಿಯ ತೊಂದರೆ ಇಲ್ಲದೆ ಪರೀಕ್ಷೆಯನ್ನು ಬರೆದಿದ್ದಾರೆ ಎಂದು ಹೇಳಿದರು.

ಧ.ರಾ.ಮ. ಸರ್ಕಾರಿ ಪ್ರೌಢಶಾಲಾ ಉಪ ಪ್ರಾಚಾರ್ಯ ಸಿದ್ದರಾಮೇಶ್ವರ ಮಾತನಾಡಿ, ನಿನ್ನೆ 61 ವಿದ್ಯಾರ್ಥಿಗಳು ವಾಪಸ್ ಹೋಗಿದ್ದರು. ಆದರೆ, ಇವತ್ತು ಅವರ ಮನವೊಲಿಸಿ ಪರೀಕ್ಷೆ ಬರೆಯುವುದಕ್ಕೆ ಅವಕಾಶ ನೀಡಿದ್ದರಿಂದ 23 ವಿದ್ಯಾರ್ಥಿಗಳು ಮಾತ್ರ ವಾಪಸ್ ಹೋಗಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಿ.ಆರ್.ಪಿ. ಕ್ಲಸ್ಟರ್ ಅಧಿಕಾರಿ ರೇವಣ್ಣ, ಪಿಎಸ್‌ಐ ಸುನೀಲ್ ಬಸವರಾಜ್ ತೆಲಿ, ಶಿಕ್ಷಕರಾದ ಈಶಪ್ಪ ಬೂದಿಹಾಳ, ಆನಂದ್, ಹೀನಾಕೌಸರ್, ಮಂಜುಳಾ, ಇಮ್ತಿಯಾಜ್, ಲೋಕೇಶ್, ಬಸವರಾಜ್ ಉಪಸ್ಥಿತರಿದ್ದರು.

## ಹೊನ್ನಾಳಿಯಲ್ಲಿ ಯೋಧರಿಗೆ ಶ್ರದ್ಧಾಂಜಲಿ



ಹೊನ್ನಾಳಿ,ಫೆ.15- ಪುಲ್ವಾಮ ದಾಳಿಯಂತಹ ಪ್ರಕರಣಗಳು ಮತ್ತೆ ಮರುಕಳಿಸದಂತೆ ಕೇಂದ್ರ ಸರ್ಕಾರವು ವಿಶೇಷ ಗಮನಹರಿಸಬೇಕು ಎಂದು ಪುರಸಭಾ ಸದಸ್ಯ ಹೊಸಕೇರಿ ಸುರೇಶ್ ಒತ್ತಾಯಿಸಿದರು.

ಪಟ್ಟಣದ ದುರ್ಗಿಗುಡಿ ಬಡಾವಣೆಯಲ್ಲಿ ಪುಲ್ವಾಮ ದಾಳಿಯಲ್ಲಿ ವೀರ ಮರಣವನ್ನಪ್ಪಿದ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅವರು ಮಾತನಾಡಿದರು. ಪತ್ರಕರ್ತ ಕೋರಿ ಯೋಗೀಶ್ ಕುಳಗಟ್ಟೆ, ಪಟ್ಟಣದ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯ ರುದ್ರಪ್ಪ ಮಾತನಾಡಿದರು. ಲಿಂಗಾಪುರದ ಗ್ರಾಮ ಒನ್ ವ್ಯವಸ್ಥಾಪಕ ಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

## ಆವರಣದ ಒಳಗೆ ಧಾರ್ಮಿಕ ವಸ್ತ್ರ ತೆಗೆಯಲು ವ್ಯವಸ್ಥೆ: ಡಿಸಿ

**(1ನೇ ಪುಟದಿಂದ)** ನಿರ್ಬಂಧಿಸಿದ್ದು ಆಕ್ಷೇಪಕ್ಕೆ ಕಾರ ಣವಾಗಿತ್ತು. ಈ ಹಿನ್ನೆಲೆಯಲ್ಲಿ ಕಾಲೇಜಿನ ಒಳಗೆ ಕೋಣೆಯೊಂದನ್ನು ಕಾಯ್ದಿರಿಸಿ, ಅಲ್ಲಿ ಹಿಜಾಬ್ ತೆರೆಯಲು ವ್ಯವಸ್ಥೆ ಮಾಡುವಂತೆ ಕಾಲೇಜುಗಳಿಗೆ ತಿಳಿಸಲಾಗಿದೆ. ಕಾಲೇಜುಗಳ ಆಡಳಿತ ಮಂಡಳಿಗಳು ಸಮವಸ್ತ್ರ ಹೊರತುಪಡಿಸಿ ಬೇರೆ ರೀತಿಯ ಧರ್ಮ, ನಂಬಿಕೆಯನ್ನು ಪ್ರತಿನಿಧಿಸುವ ವಸ್ತ್ರಗಳನ್ನು ಧರಿಸಿ ಬಂದವರನ್ನು ಕಾಲೇಜು ಹೊರಭಾಗದಲ್ಲಿ ಅಥವಾ ರಸ್ತೆಯಲ್ಲಿ ನಿಲ್ಲಿಸಿ ತೆಗೆಯಲು ಹೇಳಬಾರದು. ಕಾಲೇಜಿನ ಆವರಣದ ಒಳಗೆ ತೆಗೆಯಲು ಸೂಚಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳೂ ಸೇರಿದಂತೆ ಜಿಲ್ಲೆಯ ಹಿರಿಯ ಅಧಿಕಾರಿಗಳ ಜೊತೆ ಈಗಾಗಲೇ ಸಭೆಗಳನ್ನು ನಡೆಸಲಾಗಿದೆ. ಪೊಲೀಸ್ ಬಂದೋಬಸ್ತ್‌ಗೂ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಡಳಿತ ವಿದ್ಯಾರ್ಥಿಗಳ ಜೊತೆ ಇರಲಿದೆ ಎಂದು ಡಿಡಿಪಿಯು ಶಿವರಾಜು ಹೇಳಿದ್ದಾರೆ.

ಹೈಕೋರ್ಟ್ ಮಧ್ಯಂತರ ಆದೇಶದ ಪಾಲನೆಗಾಗಿ ಕಾಲೇಜುಗಳು ಸಮನ್ವಯಾಧಿಕಾರಿಯೊಬ್ಬರನ್ನು ನಿಯೋಜಿಸಲೂ ಸಹ ಸೂಚನೆ ನೀಡಲಾಗಿದೆ.

ಕಾಲೇಜು ಆರಂಭಕ್ಕೆ ಮುಂಚೆ ಪೋಷಕರ ಸಭೆ ಕರೆದು ಹೈಕೋರ್ಟ್ ಆದೇಶದ ಬಗ್ಗೆ ತಿಳಿಸಬೇಕು ಎಂದು ಜಿಲ್ಲಾಡಳಿತ ಸೂಚನೆ ನೀಡಿತ್ತು. ಅದರಂತೆ ಕಾಲೇಜುಗಳು ಈಗಾಗಲೇ ಸಭೆಗಳನ್ನು ನಡೆಸಿವೆ. ಈಗಾಗಲೇ ಪೋಷಕರ ಜೊತೆ ಆನ್‌ಲೈನ್ ಮೂಲಕ ಸಭೆ ನಡೆಸಿದ್ದೇವೆ. ಕಾಲೇಜಿಗೆ ಬರುವಾಗ ಮೊಬೈಲ್ ತರಬಾರದು ಎಂದು ತಿಳಿಸಿದ್ದೇವೆ. ಇದರ ಜೊತೆಗೆ ಕಾಲೇಜಿನ ಗುರುತಿನ ಚೀಟಿ ತರುವಂತೆಯೂ ಹೇಳಿದ್ದೇವೆ ಎಂದು ಎ.ವಿ.ಕೆ.ಕಾಲೇಜಿನ ಪ್ರಾಂಶುಪಾಲ ಬಿ.ಪಿ. ಕುಮಾರ್ ತಿಳಿಸಿದ್ದಾರೆ.

## ಇಂದಿನಿಂದ ಕಾಲೇಜು ಪುನರಾರಂಭ

**(1ನೇ ಪುಟದಿಂದ)** ಮುಗ್ಧ ವಿದ್ಯಾರ್ಥಿಗಳನ್ನು ಮುಂದಿಟ್ಟುಕೊಂಡು, ಸಮಾಜ ಹಾಗೂ ಮನಸುಗಳನ್ನು ಒಡೆಯುವ ಪ್ರಯತ್ನ ಮಾಡುತ್ತಿವೆ, ಅಂತಹವರನ್ನು ಗುರುತಿಸಿ, ಕಾನೂನು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಶೂನ್ಯ ವೇಳೆಯಲ್ಲಿ ಯು.ಟಿ. ಖಾದರ್, ಹಿಜಾಬ್ ಬಗ್ಗೆ ಪ್ರಸ್ತಾಪ ಮಾಡಿ ಹೈಕೋರ್ಟ್ ನೀಡಿದ ಆದೇಶದ ನಂತರವೂ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹಿಜಬ್ ಗೊಂದಲ ಮುಂದುವರೆದಿದ್ದು, ಇದನ್ನು ನಿವಾರಿಸಬೇಕು ಎಂದು ಮನವಿ ಮಾಡಿದರು.

ಹಿಜಾಬ್ ಕುರಿತ ವಿವಾದಕ್ಕೆ ಸಂಬಂಧಿಸಿದಂತೆ ತೀರ್ಪು ನೀಡುವಾಗ ನ್ಯಾಯಾಲಯ ಕಾಲೇಜು ಅಭಿವೃದ್ಧಿ ಸಮಿತಿಗಳು ಈ ಕುರಿತು ಕೈಗೊಳ್ಳುವ ತೀರ್ಮಾನಗಳನ್ನು ಪಾಲಿಸುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡಿದೆ.

ಆದರೆ, ಕಾಲೇಜು ಅಭಿವೃದ್ಧಿ ಸಮಿತಿಗೆ ಈ ಸೂಚನೆಯನ್ನು ನ್ಯಾಯಾಲಯ ನೀಡಿರುವುದರಿಂದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಗೊಂದಲ ಉಳಿದಿದೆ ಎಂದರು. ಕಾಲೇಜು ಮಟ್ಟದಲ್ಲಿ ನ್ಯಾಯಾಲಯದ ಈ ಆದೇಶ ಅನ್ವಯವಾಗುತ್ತದೆಯೇ ಹೊರತು, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಟ್ಟದಲ್ಲಲ್ಲ ಎಂದು ವಿದ್ಯಾರ್ಥಿಗಳು ಭಾವಿಸಿದ್ದಾರೆ.

ಪರಿಣಾಮವಾಗಿ ರಾಜ್ಯದಲ್ಲಿ ಹಿಜಾಬ್ ಕುರಿತಂತೆ ಇನ್ನೂ ಗೊಂದಲ ಮುಂದುವರೆದಿದೆ. ತಕ್ಷಣವೇ ಇದನ್ನು ಪರಿಹರಿಸುವ ಕೆಲಸವನ್ನು ಸರ್ಕಾರ ಮಾಡಲೇಬೇಕು. ಇಲ್ಲದಿದ್ದರೆ ಈ ಗೊಂದಲ ಮುಂದುವರೆದು ಮೊದಲೇ ಹಾಳಾಗಿರುವ ಮಕ್ಕಳ ವ್ಯಾಸಂಗಕ್ಕೆ ಮತ್ತೆ ಅಡ್ಡಿಯಾಗಲಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಆದೇಶದ ಕುರಿತಂತೆ ಇರುವ ಭಾವನೆಯೇನು? ಅನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಟ್ಟದಲ್ಲಿ ಇರುವ ಗೊಂದಲವನ್ನು ಪರಿಹರಿಸಬೇಕು ಎಂದರು.


**ಸೇಲ್ಸ್ ಬಾಯ್ಸ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಸಿಟಿಜನ್ಸ್ ದಾ
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
99727 77444
93421 95459
96863 63666

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇರಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# 19ರಂದು ಜಿಲ್ಲಾಧಿಕಾರಿ ಗ್ರಾಮ ವಾಸ್ತವ್ಯ

## ಕೊಕ್ಕನೂರಿನ ಗ್ರಾಮ ವಾಸ್ತವ್ಯದಲ್ಲಿ ಜನರ ಸಮಸ್ಯೆಗಳಿಗೆ ಪರಿಹಾರ



ಹರಿಹರ, ಫೆ. 15 - ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ನೇತೃತ್ವದಲ್ಲಿ, ಜಿಲ್ಲೆಯ ವಿವಿಧ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ 19 ರ ಶನಿವಾರ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಎಂಬ ಘೋಷಣೆಯಡಿ ಗ್ರಾಮ ವಾಸ್ತವ್ಯ ಮಾಡಲಾಗುತ್ತದೆ ಎಂದು ಉಪವಿಭಾಗಾಧಿಕಾರಿ ಮಮತಾ ಹೊಸಗೌಡ್ರು ತಿಳಿಸಿದ್ದಾರೆ.

ನಗರದ ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಗ್ರಾಮ ವಾಸ್ತವ ವಿಚಾರಕ್ಕೆ ಇಂದು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೊಕ್ಕನೂರು ಗ್ರಾಮದಲ್ಲಿ ರಾತ್ರಿ ವಾಸ್ತವ್ಯ ಮಾಡಿ ನಂತರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರ ಸಮಸ್ಯೆಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ಭಾಗ್ಯ ಲಕ್ಷ್ಮಿ ಬಾಂಡ್, ಸ್ಮಶಾನ ಜಾಗ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಆರೋಗ್ಯ, ಕೃಷಿ, ಶಿಕ್ಷಣ, ತೋಟಗಾರಿಕೆ ಸೇರಿದಂತೆ ಸಾರ್ವಜನಿಕರಿಗೆ ಉಪಯುಕ್ತ ಮಾಹಿತಿ ನೀಡಲು ಮಳಿಗೆಗಳನ್ನು ನಿರ್ಮಿಸಲಾಗುವುದು. ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸಲಾಗುವುದು. ಗ್ರಾಮಕ್ಕೆ ಜಿಲ್ಲಾಧಿಕಾರಿ ಸೇರಿದಂತೆ ಜಿಲ್ಲೆಯ ವಿವಿಧ ಇಲಾಖೆಯ ಅಧಿಕಾರಿಗಳ ತಂಡ ಆಗಮಿಸುವುದರಿಂದ ಗ್ರಾಮದಲ್ಲಿ ಸ್ವಚ್ಛತೆ, ರಸ್ತೆ ಸುಧಾರಣೆ, ರಸ್ತೆ ಬದಿಯಲ್ಲಿ ತಿಪ್ಪೆಗಳ ತೆರವು ಮತ್ತು, ಗಿಡ ಗಂಟೆಗಳನ್ನು ತೆರವು ಮಾಡಿ ಗ್ರಾಮವನ್ನು ಶೃಂಗಾರ ಮಾಡಿಕೊಳ್ಳುವಂತೆ ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ತಾಪಂ ಇಓ ಗಂಗಾಧರನ್, ಬಿಇಓ ಬಿ.ಸಿ. ಸಿದ್ದಪ್ಪ, ಬೆಸ್ಕಾಂ ಲಕ್ಷ್ಮಪ್ಪ, ಕೃಷಿ ಇಲಾಖೆಯ ನಾರನಗೌಡ್ರು, ಆರೋಗ್ಯ ಇಲಾಖೆಯ ಡಾ. ಚಂದ್ರಮೋಹನ್, ಗ್ರಾಮೀಣ ಕುಡಿಯುವ ನೀರು, ಟಿ.ಎಂ. ನಾಗರಾಜಯ್ಯ, ಸಿಡಿಪಿಓ ನಿರ್ಮಲ, ಎಪಿಎಂಸಿಯ ವಿದ್ಯಾ, ಬಿಸಿಎಂನ ಪರವಿನ್ ಬಾನು, ಲೋಕೋಪಯೋಗಿ ಇಲಾಖೆಯ ಚಂದ್ರಕಾಂತ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಬುಡಕಟ್ಟು ಜನರಲ್ಲಿ ಆತ್ಮಗೌರವ ತುಂಬಿದ ಸಂತರು

## ಸಂತ ಸೇವಾಲಾಲ್‌ರ 283ನೇ ಜಯಂತಿ ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಒ ವಿಜಯ ಮಹಾಂತೇಶ್



ದಾವಣಗೆರೆ, ಫೆ.15- ಬುಡಕಟ್ಟು ಸಮುದಾಯದ ಜನರಲ್ಲಿ ಆತ್ಮಸ್ಥೈರ್ಯ ಮತ್ತು ಆತ್ಮಗೌರವ ತುಂಬುವ ಕಾರ್ಯ ಮಾಡಿದವರು ಸಂತ ಸೇವಾಲಾಲ್ ಮಹಾರಾಜರು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸರಳವಾಗಿ ಆಯೋಜಿಸಲಾಗಿದ್ದ ಸಂತ ಸೇವಾಲಾಲ್ ಮಹಾರಾಜರ 283ನೇ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಅವರು ಮಾತನಾಡಿದರು.

ದೇಶ ಕಂಡ ಹಲವಾರು ಸಾಧು-ಸಂತರಲ್ಲಿ ಸೇವಾಲಾಲ್ ಮಹಾರಾಜರು ಒಬ್ಬರು. ಧ್ಯಾನ, ಭಕ್ತಿ, ತಪಸ್ಸು ಮುಖಾಂತರ ಅಧ್ಯಾತ್ಮಿಕ ಕ್ಷೇತ್ರಕ್ಕೆ ಜೀವನವನ್ನೇ ಮುಡಿಪಾಗಿಟ್ಟರು. ಬುಡಕಟ್ಟು ಜನರಲ್ಲಿ ಧೈರ್ಯ, ಸಾಹಸ, ಆತ್ಮಸ್ಥೈರ್ಯ ಮತ್ತು ಆತ್ಮಗೌರವ ತುಂಬುವ ಕಾರ್ಯ ಮಾಡಿದ ಅವರು, ಜನರಲ್ಲಿ ಮೂಢನಂಬಿಕೆಗಳನ್ನು ತೊಡೆದುಹಾಕಿ ಸನ್ಮಾರ್ಗದತ್ತ ತೆಗೆದುಕೊಂಡು ಹೋಗುವಲ್ಲಿ ಯಶಸ್ವಿಯಾದರು. ಅವರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಸಮಾಜವನ್ನು ಒಗ್ಗೂಡಿಸಲು ಅನುಕೂಲವಾಗಲಿದೆ ಎಂದು ಸಿಇಒ ಡಾ. ವಿಜಯ ಮಹಾಂತೇಶ್ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ರೇಷ್ಮಾ ಕೌಸರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಡಿಯುಡಿಸಿ ಯೋಜನಾ ನಿರ್ದೇಶಕರಾದ ನಜ್ಮಾ, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಯಶವಂತ ಸರ ದೇಶಪಾಂಡೆ, ಅಡ್ಡೆಂಡ ಕಾರ್ಯಪ್ಪ, ಬಂಜಾರ ಸಮುದಾಯದ ಮುಖಂಡ ಕುಬೇರನಾಯ್ಕ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಪೌರಾಯುಕ್ತರ ವಿರುದ್ಧ ಪ್ರತಿಭಟನೆ



ಹರಿಹರ, ಫೆ.15 - ನಗರಸಭೆಯ ಪೌರಾಯುಕ್ತರಾದ ಎಸ್. ಲಕ್ಷ್ಮಿ ಸೇರಿದಂತೆ ಇಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸರಿಯಾಗಿ ಕರ್ತವ್ಯ ನಿಭಾಯಿಸಲು ವಿಫಲರಾಗಿದ್ದಾರೆ. ಜಿಲ್ಲೆಯ ಹಿರಿಯ ಅಧಿಕಾರಿಗಳು ಇಲ್ಲಿನ ವ್ಯವಸ್ಥೆ ಸರಿಪಡಿಸಬೇಕು ಎಂದು ನಗರಸಭೆಯ ಉಪಾಧ್ಯಕ್ಷ ಹಾಗೂ ಸದಸ್ಯರು ಪ್ರತಿಭಟಿಸಿದ್ದಾರೆ.

ಈ ವೇಳೆ ಮಾತನಾಡಿದ ನಗರಸಭೆ ಸದಸ್ಯ ದಿನೇಶ್ ಬಾಬು, ಪೌರಾಯುಕ್ತರು ಕಚೇರಿಗೆ ಸರಿಯಾದ ಸಮಯಕ್ಕೆ ಆಗಮಿಸುವುದಿಲ್ಲ. ನಗರಸಭೆಯ ಸಿಬ್ಬಂದಿಗಳು ಜನರನ್ನು ಸಣ್ಣ ಪುಟ್ಟ ಕೆಲಸಕ್ಕೆ ತಿಂಗಳುಗಟ್ಟಲೇ ಅಲೆದಾಡಿಸುತ್ತಾರೆ. ಸಾರ್ವಜನಿಕರು ಇವರ ವರ್ತನೆಯನ್ನು ನೋಡಿ ನೋಡಿ ಬೇಸತ್ತಿದ್ದಾರೆ ಎಂದರು.

ಆರ್. ರಾಘವೇಂದ್ರ ಮಾತನಾಡಿ, ನಗರಸಭೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕೋವಿಡ್ ಮೀಟಿಂಗ್ ಇದೆ ಎಂದು ನೆಪ ಮಾಡಿಕೊಂಡು ಹೋಗುತ್ತಾರೆ. ನಗರಸಭೆಗೆ ಆಗಮಿಸುವ ಸಾರ್ವಜನಿಕರು ಖಾತೆ ಎಕ್ಸ್ ಟ್ರಾಕ್ಟ್, ಲೈಸೆನ್ಸ್, ಜನನ, ಮರಣ ಪತ್ರ, ಸೇರಿದಂತೆ ಅಗತ್ಯ ದಾಖಲೆಗಳನ್ನು ಪಡೆಯಲು ಬಂದಾಗ ಸಿಬ್ಬಂದಿಗಳು ಇಲ್ಲದೆ ಪರದಾಡುತ್ತಾರೆ ಎಂದರು.

ನಗರದಲ್ಲಿ ಐತಿಹಾಸಿಕ ಶ್ರೀ ಹರಿಹರೇಶ್ವರ ದೇವಾಲಯದ ರಥೋತ್ಸವ ನಡೆಯುತ್ತದೆ. ರಥೋತ್ಸವದ ಬಗ್ಗೆ ಇದುವರೆಗೂ ಯಾವ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಅಧಿಕಾರಿಗಳು ಆಗಮಿಸಿ ನೋಡಿರುವುದಿಲ್ಲ ಎಂದು ಹೇಳಿದರು.

ಉಪಾಧ್ಯಕ್ಷ ಬಾಬುಲಾಲ್, ಸದಸ್ಯರಾದ ದಿನೇಶ್ ಬಾಬು, ಕೆ.ಜಿ. ಸಿದ್ದೇಶ್, ಪಿ.ಎನ್. ವಿರುಪಾಕ್ಷ, ಅಬ್ದುಲ್ ಅಲಿಂ, ಮುಖಂಡರಾದ ಆರ್. ರಾಘವೇಂದ್ರ, ಮಾರುತಿ ಬೇಡರ್, ದಾದಾಪೀರ್ ಭಾನುವಳ್ಳಿ ಇತರರು ಪ್ರತಿಭಟನೆಯಲ್ಲಿದ್ದರು.

# ಮಡಿವಾಳ ಸಮುದಾಯಕ್ಕೆ ನೆರವು



## ಕಿಶೋರ್ ಕುಮಾರ್ ಭರವಸೆ

ದಾವಣಗೆರೆ, ಫೆ. 15- ಕುಲಕಸುಬು ಮಾಡಿಕೊಂಡು ಸಮಾಜದ ಮುಖ್ಯವಾಹಿನಿಗೆ ಬಾರದೇ ಇರುವ ಮಡಿವಾಳ ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದಿಂದ ಸಿಗುವ ಸೌಲಭ್ಯಗಳು ದೊರಕಬೇಕು. ಈ ನಿಟ್ಟಿನಲ್ಲಿ ಶಕ್ತಿಮೀರಿ ಪ್ರಯತ್ನ ಮಾಡಲಾಗುವುದು ಎಂದು ಜಿಲ್ಲಾ ಮಡಿಕಟ್ಟೆ ಯುವಕರ ಸಂಘದ ನೂತನ ಅಧ್ಯಕ್ಷ ಕಿಶೋರ್ ಕುಮಾರ್ ಭರವಸೆ ನೀಡಿದರು.

ನಗರದ ರಾಷ್ಟ್ರೀಯ ಹೆದ್ದಾರಿ-4 ಜಿಲ್ಲಾ ಪಂಚಾಯತ್ ಸಮೀಪದಲ್ಲಿ ಇರುವ ಮಡಿಕಟ್ಟೆಯಲ್ಲಿ ನಡೆದ (ಧೋಬಿ ಘಾಟ್) ಮಡಿಕಟ್ಟೆಯ ನೂತನ ಪದಾಧಿಕಾರಿಗಳ ಆಯ್ಕೆ ಸಭೆಯ ನಂತರ ಮಾತನಾಡಿ, ದಾವಣಗೆರೆಯ ಮಡಿಕಟ್ಟೆಗೆ ಕಟ್ಟಡವಿದ್ದು, ಇಲ್ಲಿಗೆ ಸುಮಾರು 47 ಲಕ್ಷ ರೂ.ಮೌಲ್ಯದ 5 ಬಟ್ಟೆ ತೊಳೆಯುವ ಯಂತ್ರಗಳು (ವಾಷಿಂಗ್ ಮೆಷಿನ್) ಅಗತ್ಯವಿದ್ದು, ಈ ಕುರಿತು ಜನಪ್ರತಿನಿಧಿಗಳು, ಪಾಲಿಕೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಜಿಲ್ಲಾ ಮಡಿವಾಳ ಮಾಚಿದೇವ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷರೂ, ಕಾರ್ಮಿಕ ಮುಖಂಡರೂ ಆದ ಹೆಚ್.ಜಿ.ಉಮೇಶ್ ಆವರಗೆರೆ ಮಾತನಾಡಿ, ಮೂಲ ಭೂತ ಸೌಲಭ್ಯಗಳನ್ನು ಪಡೆಯಲು ಒಟ್ಟಾಗಿ ಹೋರಾಟ ಮಾಡಬೇಕಿದೆ ಎಂದು ಕರೆ ನೀಡಿದರು.

ಸಭೆಯಲ್ಲಿ ನೂತನ ಅಧ್ಯಕ್ಷರ ಆಯ್ಕೆಯೊಂದಿಗೆ ಉಪಾಧ್ಯಕ್ಷರಾಗಿ ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಬಿ.ಬಸವರಾಜ, ಜಂಟಿ ಕಾರ್ಯದರ್ಶಿಯಾಗಿ ಎಸ್.ನಿಂಗರಾಜ್, ಸಂಘಟನಾ ಕಾರ್ಯದರ್ಶಿಯಾಗಿ ಎಂ.ರವಿ, ಖಜಾಂಚಿಯಾಗಿ ಗುತ್ಯೆಪ್ಪ, ಸಹ ಖಜಾಂಚಿಯಾಗಿ ಪ್ರವೀಣ್, ನಿರ್ದೇಶಕರಾಗಿ ಬಿ.ರವಿಕುಮಾರ್, ಕೃಷ್ಣಮೂರ್ತಿ, ಲಂಕೇಶ್, ಜಗದೀಶ್ ಹಾಗೂ ಸಲಹಾ ಸಮಿತಿ ಸದಸ್ಯರನ್ನಾಗಿ ಮಡಿಕಟ್ಟೆ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಈ ವೇಳೆ ಜಿಲ್ಲಾ ಸಂಘದ ಮಾಧ್ಯಮ ಸಲಹೆಗಾರ, ಪತ್ರಕರ್ತ ಎಂ.ವೈ.ಸತೀಶ್, ನಿಕಟಪೂರ್ವ ಅಧ್ಯಕ್ಷ ಫಕ್ಕೀರಸ್ವಾಮಿ, ಡೈಮಂಡ್ ಮಾಲತೇಶ್, ದೊಡ್ಡಾಳ್ ನಿಂಗಣ್ಣ, ಎಂ.ಮಲ್ಲೇಶಪ್ಪ, ಹನುಮಂತಪ್ಪ, ಮಂಜುನಾಥ್, ಪರಶುರಾಮ, ನಾಗರಾಜ್,

ಹನುಮಂತ, ಅಜ್ಜಯ್ಯ, ಶಂಕರ್, ಮಡಿವಾಳಪ್ಪ ಸೇರಿದಂತೆ ನೂತನ ಪದಾಧಿಕಾರಿಗಳು ಇದ್ದರು.

# ಹರಿಹರೇಶ್ವರ ಅದ್ಧೂರಿ ರಥೋತ್ಸವಕ್ಕೆ ಅವಕಾಶವಿಲ್ಲ

ಹರಿಹರ, ಫೆ.15- ಐತಿಹಾಸಿಕ ಶ್ರೀ ಹರಿಹರೇಶ್ವರ ಮಹಾ ರಥೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಅವಕಾಶವಿಲ್ಲದ ಕಾರಣ ಪೂಜೆ, ಸೇರಿದಂತೆ ಧಾರ್ಮಿಕ ವಿಧಿ ವಿಧಾನಗಳನ್ನು ಸರಳವಾಗಿ ನಡೆಸಲಾಗುತ್ತದೆ ಎಂದು ದಾವಣಗೆರೆ ಉಪವಿಭಾಗಾಧಿ ಕಾರಿ ಮಮತಾ ಹೊಸಗೌಡ್ರು ತಿಳಿಸಿದ್ದಾರೆ.

ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೊರೊನಾ ಮಾರ್ಗಸೂಚಿ ಪಾಲನೆ ಮಾಡಬೇಕಾದ ಹಿನ್ನೆಲೆಯಲ್ಲಿ ರಥೋತ್ಸವದ ಅಂಗವಾಗಿ ಅಂಗಡಿಗಳನ್ನು ತೆರೆದು ಮಾರಾಟ ಮಾಡಲು ಅವಕಾಶ ನೀಡಿರುವುದಿಲ್ಲ ಎಂದು ಹೇಳಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ನಾವು ರಥೋತ್ಸವ ಸದ್ದು ಮಾಡಲಾಗಿದೆ ಎಂದು ಹೇಳಿಲ್ಲ. ರಥೋತ್ಸವದ ಪೂಜಾ ವಿಧಿಗಳು ಬ್ರಾಹ್ಮೀ ಮುಹೂರ್ತದಲ್ಲಿ ನಡೆಯಲಿವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಆರ್.ಐ. ಆನಂದ್ ಇತರರು ಇದ್ದರು.




## ವನಿತಾ ಸಮಾಜದಿಂದ ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ, ಫೆ. 15- ವನಿತಾ ಸಮಾಜದಿಂದ ವಿವಿಧ ಸಂಸ್ಥೆಗಳ ಸದಸ್ಯೆಯರಿಗೆ ಇದೇ ಸಾಂಸ್ಕೃತಿಕ ಸ್ಪರ್ಧೆ ನಡೆಯಲಿವೆ. 24 ರಂದು ಮಧ್ಯಾಹ್ನ 2.30 ಕ್ಕೆ ಚರ್ಚಾ ಸ್ಪರ್ಧೆ, 25 ರಂದು ಸಂಜೆ 4.30 ಕ್ಕೆ ಜಾನಪದ ನೃತ್ಯ, 26 ರಂದು ಮಧ್ಯಾಹ್ನ 2.30 ಕ್ಕೆ ರಸಪ್ರಶ್ನೆ ಸ್ಪರ್ಧೆ, 27 ರಂದು ಮಧ್ಯಾಹ್ನ 2.30 ಕ್ಕೆ ಆರೋಗ್ಯವಂತ ಮಹಿಳೆ ಸ್ಪರ್ಧೆ ನಡೆಯಲಿದೆ. ಸಂಪರ್ಕಿಸಿ : ನಾಗರತ್ನ ಜಗದೀಶ್ (9844168469), ಹೇಮಾ ಶ್ರೀನಿವಾಸ್ (99862 83555), ಪದ್ಮಪ್ರಕಾಶ್ (9449811407), ಪುಷ್ಪ ಎನ್.ಹೆಚ್. (9964913202).

## ಜಗಳೂರು : ನಾಳೆ ಉಚಿತ ಹೃದಯ ತಪಾಸಣಾ ಶಿಬಿರ

ಜಗಳೂರು, ಫೆ.15- ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್ (ದಾವಣಗೆರೆ), ಶ್ರೀ ರಾಘವೇಂದ್ರ ಆಸ್ಪತ್ರೆ (ಜಗಳೂರು), ಲಯನ್ಸ್ ಕ್ಲಬ್ (ಜಗಳೂರು), ಅಮ್ಮ ಲಯನ್ಸ್ ಕ್ಲಬ್ ನಿಯೋಜಿತ ಲಿಯೋ ಕ್ಲಬ್ (ಜಗಳೂರು) ಇವರ ಆಶ್ರಯದಲ್ಲಿ ನಾಡಿದ್ದು ದಿನಾಂಕ 17 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಶ್ರೀ ರಾಘವೇಂದ್ರ ಆಸ್ಪತ್ರೆಯಲ್ಲಿ ಉಚಿತ ಹೃದಯ ತಪಾಸಣಾ ಶಿಬಿರ ನಡೆಯಲಿದೆ.

ಶಿಬಿರದಲ್ಲಿ ವಿಶೇಷ ಸೌಲಭ್ಯಗಳಾದ ಇಸಿಜಿ, 3ಡಿ ಇಕೋ, ತಜ್ಞರೊಂದಿಗೆ ಸಮಾಲೋಚನೆ ನಡೆಸಬಹುದಾಗಿದೆ. ಹಿರಿಯರು ಮತ್ತು ಮಕ್ಕಳ ಹೃದಯ ಸಮಸ್ಯೆಗಳಿಗೆ ತಜ್ಞ ವೈದ್ಯರೊಂದಿಗೆ ಸಮಾಲೋಚನೆ ನಡೆಯಲಿದೆ. ವಿವರಗಳಿಗೆ ಮೊ: 99800 26026, 98458 67907, 91649 11143, 82968 20570, ದೂರವಾಣಿ ಸಂಖ್ಯೆ: 08196-227328 ಗೆ ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಹುಣ್ಣಿಮೆ ಕಾರ್ಯಕ್ರಮ

ಅಕ್ಕಮಹಾದೇವಿ ಸಮಾಜದ ವತಿಯಿಂದ ಹುಣ್ಣಿಮೆ ಕಾರ್ಯಕ್ರಮದಡಿಯಲ್ಲಿ ಭರತ ಹುಣ್ಣಿಮೆ ಅಂಗವಾಗಿ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 5.30ಕ್ಕೆ ಚಿಂತನ-ಮಂಥನ ಕಾರ್ಯಕ್ರಮ ನಡೆಯಲಿದೆ.

ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕೆ.ಕೆ. ಸುಶೀಲಮ್ಮ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ಸದ್ಗುರು ಸದಾಫಲದೇವ್ ಜೀ ಅವರ ವಿಹಂಗಮ ಯೋಗ ಧ್ಯಾನ (ಮೆಡಿಟೇಷನ್) ನಡೆಯಲಿದೆ.

## ನಗರದಲ್ಲಿ ಇಂದು ಯಲ್ಲಮ್ಮ ದೇವಿ ಜಾತ್ರೆ

ಯಲ್ಲಮ್ಮ ನಗರ 4ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆಯ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದಲ್ಲಿ ಭರತ ಹುಣ್ಣಿಮೆ ಜಾತ್ರೆ ಇಂದು ಜರುಗಲಿದೆ.











## ಹರಿಹರೇಶ್ವರನಿಗೆ ರುದ್ರಾಭಿಷೇಕ

ಹರಿಹರ, ಫೆ.15- ನಗರದ ಐತಿಹಾಸಿಕ ಶ್ರೀ ಹರಿಹರೇಶ್ವರ ಸ್ವಾಮಿಯ ರಥೋತ್ಸವದ ನಿಮಿತ್ತವಾಗಿ ಸ್ವಾಮಿಗೆ ರಾತ್ರಿ ರುದ್ರಾಭಿಷೇಕ, ಸಹಸ್ರ ನಾಮ ಸೇರಿದಂತೆ ವಿಶೇಷ ಪೂಜಾ ಕಾರ್ಯಗಳು ನಡೆದವು. ಈ ಸಂದರ್ಭದಲ್ಲಿ ಜೋಯಿಸರಾದ ನಾರಾಯಣ ಜೋಯಿಸರು, ಚಿದಂಬರ ಜೋಯಿಸರು, ಹರಿಶಂಕರ್ ಜೋಯಿಸರು, ಕೃಷ್ಣಮೂರ್ತಿ ಜೋಯಿಸರು, ಅರ್ಚಕ ಗುರುಪ್ರಸಾದ್ ಸೇರಿದಂತೆ ಇತರರು ಹಾಜರಿದ್ದರು.

# ಸಾಸ್ವಿಹಳ್ಳಿಯಲ್ಲಿ ಹಿಜಾಬ್, ಟೋಪಿ ಧರಿಸಿ ಬಂದ ವಿದ್ಯಾರ್ಥಿಗಳು

ಸಾಸ್ವೆಹಳ್ಳಿ, ಫೆ. 15- ಇಲ್ಲಿನ ಪ್ರೌಢ ಶಾಲೆಗೆ 50ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಹಿಜಾಬ್ ಹಾಗೂ 10ಕ್ಕೂ ಹೆಚ್ಚು ಬಾಲಕರು ತಮ್ಮ ಧರ್ಮದ ಟೋಪಿ ಧರಿಸಿ ಬಂದಿದ್ದು, ಶಾಲೆಯ ಪ್ರಾಂಶುಪಾಲರು, ಉಪಪ್ರಾಂಶುಪಾಲರು, ಹಿಜಾಬ್ ಹಾಗೂ ಟೋಪಿ ತೆಗೆದು ತರಗತಿಗೆ ಹೋಗಲು ತಿಳಿಸಿದಾಗ ವಿದ್ಯಾರ್ಥಿಗಳು ನಿರಾಕರಿಸಿದ ಘಟನೆ ನಡೆದಿದೆ.

ಇಬ್ಬರು ಅತಿಥಿ ಶಿಕ್ಷಕಿಯರೂ ಸಹ ಹಿಜಾಬ್ ಧರಿಸಿ ಬೋಧನೆ ಮಾಡುತ್ತಿದ್ದರು. ಅವರಿಗೂ ಅಧಿಕಾರಿಗಳು ಹಿಜಾಬ್ ಧರಿಸುವಂತಿಲ್ಲ ಎಂದು ತಿಳಿಸಿದಾಗ, ಶಿಕ್ಷಕಿಯರು ತರಗತಿಯಿಂದ ಹೊರ ನಡೆದಿದ್ದಾರೆ.

ಕಂದಾಯ ಇಲಾಖೆಯ ಉಪತಹಶೀಲ್ದಾರ್ ಎಸ್. ಪರಮೇಶ್ ನಾಯ್ಕ್, ಎಸ್‌ಐ ಬಸವನಗೌಡ ಬಿರಾದಾರ್, ತಾಲ್ಲೂಕು ಪಂಚಾಯಿತಿ ಇಒ ಹಾಗೂ ಹೊನ್ನಾಳಿ ತಾಲ್ಲೂಕಿನ ಗ್ರಾಮೀಣ ಭಾಗದ ನೋಡಲ್ ಅಧಿಕಾರಿ ರಾಮ ಭೋವಿ, ಕ್ಷೇತ್ರ ಶಿಕ್ಷಣಾಧಿಕಾರಿ ಜೆ.ಇ ರಾಜೀವ್ ವಿದ್ಯಾರ್ಥಿಗಳ ಮನವೊಲಿಕೆಗೆ ಯತ್ನಿಸಿದರು. ಹಿಜಾಬ್ ಧರಿಸಿದ್ದ 30ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ತಮಗೆ ಹಿಜಾಬ್ ಮುಖ್ಯ ಎಂದು ಹೇಳಿ ಶಾಲೆಯಿಂದ ಹೊರ ನಡೆದಿದ್ದಾರೆ.



ತಹಶೀಲ್ದಾರ್ ಬಸನ ಗೌಡ ಕೋಟೂರು ಸ್ಥಳಕ್ಕೆ ಬಂದು ಸ್ಥಳೀಯ ಮುಖಂಡರಾದ ಜಬ್ಬಾರ್ ಖಾನ್, ಸುಲೇಮಾನ್ ಖಾನ್, ಇದಾಯತ್ ಉಲ್ಲಾ ನೇತೃತ್ವದಲ್ಲಿ ಸಭೆ ನಡೆಸಿದ್ದಾರೆ. ನಂತರ ಜಿಲ್ಲಾಧಿಕಾರಿ ಅವರೊಂದಿಗೆ ದೂರವಾಣಿ ಮೂಲಕ ಚರ್ಚಿಸಿ ಹಿಜಾಬ್ ತೆಗೆಸಿ, ಹೆಗಲ ಮೇಲೆ ಹಾಕಿ ಕೊಂಡು ಮಧ್ಯಾಹ್ನದ ಅವಧಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟರು.

ಪ್ರಾಂಶುಪಾಲರಾದ ಆರ್. ದೇವೀರಪ್ಪ ಮಾತನಾಡಿ, ಪೋಷಕರ ಸಭೆ ಕರೆದು ಅವರಿಗೆ ನ್ಯಾಯಾಲಯದ ತೀರ್ಪಿನ ಬಗ್ಗೆ ಮಾಹಿತಿ ನೀಡಿದ್ದೇವೆ. ಶಾಂತಿ ಸೌಹಾರ್ದತೆ ಕಾಪಾಡಲು ತಿಳಿಸಲಾಗಿದೆ. ಪದವಿ ಪೂರ್ವ ಕಾಲೇಜು ಪೋಷಕರ ಸಭೆಯಲ್ಲಿ ಮಾಹಿತಿ ನೀಡಲಾಗಿದೆ. ಹಿಜಾಬ್, ಶಾಲು ಧರಿಸಿ ಬರುವಂತಿಲ್ಲ ಎಂದು ತಿಳಿಸಿದರು.

## ಐಎಎಸ್ ಶ್ರೇಣಿಗೆ ಪದ್ಮ ಬಸವಂತಪ್ಪ



ಬೆಂಗಳೂರು, ಫೆ.15 – ಕೆ.ಎ.ಎಸ್. ಅಧಿಕಾರಿಯಾಗಿದ್ದ ಪದ್ಮ ಬಸವಂತಪ್ಪ ಅವರಿಗೆ ಐ.ಎ.ಎಸ್. (ಕರ್ನಾಟಕ ಕೇಡರ್) ಶ್ರೇಣಿಗೆ ಪದೋನ್ನತಿ ನೀಡಲಾಗಿದೆ. ಈ ಬಗ್ಗೆ ಕೇಂದ್ರದ ಸಿಬ್ಬಂದಿ ಸಚಿವಾಲಯ ಆದೇಶ ಹೊರಡಿಸಿದೆ.

ಪದ್ಮ ಅವರು ಈ ಹಿಂದೆ ದಾವಣಗೆರೆ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಈಗ ಕೆಎಸ್‌ಎಸ್‌ಐಡಿಸಿ ಪ್ರಧಾನ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಆವರಗೊಳ್ಳ : ಶ್ರೀ ವೀರಭದ್ರೇಶ್ವರ ಜಾತ್ರೆ

ಆವರಗೊಳ್ಳದಲ್ಲಿ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿಯ ಜಾತ್ರೋತ್ಸವ ಇಂದು ಭರತ ಹುಣ್ಣಿಮೆಯಿಂದ ಪ್ರಾರಂಭವಾಗಿ ಇದೇ ದಿನಾಂಕ 21 ರಂದು ಮಹಾರಥೋತ್ಸವ ಜರುಗಲಿದೆ ಎಂದು ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ಸೇವಾ ಸಂಘದ ಅಧ್ಯಕ್ಷ ಬಿ.ಎಂ. ಷಣ್ಮುಖಯ್ಯ ತಿಳಿಸಿದ್ದಾರೆ.





















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte